॥ ಶ್ರೀ ॥

ಗೀತಾ ಲಹರಿ



ಸಂಗ್ರಾಹಕರು:

ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ,

ಧಾರವಾಡ

ಬೆಲೆ: ೩ ಆಣೆ

ಪುನರ್ಮುದ್ರಣ: ೧೯೪೩

[illegible]ದ ಬಹಳ ತುಟ್ಟಿಯಾದ್ದರಿಂದ ಬೆಲೆ ಏರಿಸಲಾಗಿದೆ.

ಪರಿವಿಡಿ

॥ ಶ್ರೀ ॥

ಗೀತಾ ಲಹರಿ

ಧಾರವಾಡ ಶ್ರೀ ಮೃತ್ಯುಂಜಯಸ್ವಾಮಿ

ಕಲಿತನದಿ ಕನ್ನಡಿಗರೀಗಾ । ಎದ್ದೇಳಿರಿ ಯುದ್ಧಕೆ ಬೇಗ । ಯೆಂಬದಾಟಿ

ಕಾಯೊ ಶ್ರೀ ಮೃತ್ಯುಂಜಯಯೋಗಿ । ಕಾಯೋ ಭಕ್ತರ ನೀ ಶಿವಯೋಗಿ ॥ ಪಲ್ಲ ॥

ಕಾಮನನು ಗೆದ್ದ ಶ್ರೀತವೆಯೋಗಿ ।
ಮಮಕಾರವ ನಳಿದ ಭವತ್ಯಾಗಿ ।
ಶಮೆದಮೆ ಶಾಂತಿಯ ತಳಿದ ಭೋಗಿ ।
ಕಾಯೊ ನಾಡಶೇವೆಗಾಗಿ । ಕಾಯೊ ವಿದ್ಯಾರ್ಥಿಗಳನುರಾಗಿ ॥ ೧ ॥

ಈಶ ಸೇವೆಯೆ ದೇಶಸೇವೆಯೆಂದು ।
ಕಾಶಿ ರಾಮೇಶ್ವರ ಯಾತಕೆ ಬೇಕೆಂದು ।
ಈಶ ಶರಣರ ಮಕ್ಕಳನು ಕರತಂದು ।
ಸಲಹಿದೆಯೊ ಅನ್ನದಾನವನಿತ್ತು । ಕಲಿಸಿದೆಯೊ ಮಹಾವಿದ್ಯೆಯನಿತ್ತು ॥ ೨ ॥

ಕಾಯಕವೆ ಕೈಲಾಸವೆಂದರಿತು ।
ಕಾಯಕದೊಳು ಕೈಲಾಸ ನೀ ಮಳೆತು ।
ಕಾಯವು ಲಿಂಗದ ಮನೆಯೆಂದರಿತು ।
ಕಾಯವ ಸವೆಸಿದಿ ಪರಹಿತಕಾಗಿ । ಕಾಯಕದಿಂದ ಕಂಡೆ ನಿತ್ಯ ಸುಖ ಯೋಗಿ ॥ ೩ ॥

ಗುರುಲಿಂಗ ಜಂಗಮರ ಪ್ರೇಮಿ ।
ಬರ ಮಾಡಿದಿ ಎಲ್ಲ ಸ್ವಾಮಿಗಳ ಕಾಮಿ ।
ಅರವತ್ತು ಮೂರು ಮಂಟಪ ಪೂಜೆನೇಮಿ ।
ದರುಶನವ ಮಾಡಿಸಿದಿ ನಮಗಾಗಿ । ಮೆರೆಸಿದೆಯೊ ಬೆಳ್ಳಿಹಬ್ಬವ ಯೋಗಿ ॥ ೪ ॥

ಜೀವನ್ಮುಕ್ತನು ನಿತ್ಯ ನೀನಹುದು ।
ಶಿವ ಶರಣರೊಳು ಮಿಗಿಲು ನೀನಹುದು ।
ಶಿವನಿಗೆ ನಚ್ಚಿನ ಮಗ ನೀನಹುದು ।
ನಿನಗೇನು ಹೆಚ್ಚಿನದು ಬೇಕಿನ್ನು । ಶಿವನೆ ನಿನ್ನೊಳು ಬಂದು ಬೆರೆತಿಹನು ॥ ೫ ॥

ನಿಂದನೆ ವಂದನೆ ನಿನಗವು ಒಂದೇ ।
ಇಂದಿರ ಮಂದಿರ ನಿನಗವು ಒಂದೇ ।
ಅಂದಣ ಕುಂದಣ ನಿನಗವು ಒಂದೇ ।
ಹಿರಿದು ಕಿರಿದೆಂಬ ಭೇದಾ । ನಿನಗಿಲ್ಲ ಸುಮ್ಮನಿರು ಅಭೇದಾ ॥ ೬ ॥

ಬೂದಿ ಮುಚ್ಚಿದ ಕೆಂಡದಂಥವ ನೀನು ।
ಹಾದಿ ಹುಡುಕುವೆ ಒಳಗೊಳಗೆ ನೀನು ।
ಹುದುಗಿರುವೆ ಅರಿತವರೊಳು ನೀನು ।
ನಿನ್ನ ನಿಲವ ನಾರು ಅರಿತವರು । ಅವರೆ ನೋಡು ನಿನ್ನನುಯಾಯಿಗಳು ॥ ೭ ॥

ವೀರಶೈವ ಧರ್ಮ ಮಾರ್ಗದ ಜ್ಯೋತಿ ।
ವರ ಕನ್ನಡ ಬೆಳಸಿದ ಸತ್ಯಮೂರ್ತಿ ।
ಮೆರೆಯಲಿ ಜಗದೊಳು ನಿನ್ನಯ ಕೀರ್ತಿ ।
ಶಿರಬಾಗಿ ನಮಿಸುವೆನು ಶಿವಶರಣ । ಕೊಡು ಯೆನಗೆ ನೀ ಒಳ್ಳೆಯ
ಮರಣ ॥ ೮ ॥

ಧಾರವಾಡ ಮುರಘಾಮಠದ
ಫ್ರಿ ಬೋರ್ಡಿಂಗ ಬೆಳ್ಳಿಹಬ್ಬ
೧೮-೧-೧೯೪೨

ಶಿವಶರಣರ ಪಾದಧೂಳಿ
ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ

ನಾರಿಯರ ಭಾಗ್ಯ ಯಾವುದು ?

ನಾವೆಂಥ ಮಾನವರು ಯೆಂಬಧಾಟಿ

ಭಾರತದ ನಾಡ ನಾರಿಯರೇ । ಪತಿವ್ರತವು ಮಿಗಿಲು ಸುದತಿಯರೇ ॥
ನಾರಿಯರ ಭೂರಿ ಭಾಗ್ಯ । ಪತಿ ದೇವನಿಂದ ಸೌಭಾಗ್ಯ ॥ ಪ ॥

ಬೆಳಗಾಗಲೆದ್ದು ಮುಖವ । ತೊಳೆದೊಲಿದು ಕುಂಕುಮಧರಿಸಿ ।
ಒಲಿದೊಲಿದು ಗುರುಹಿರಿಯರಿಗೆ । ನಲ್ಲನಿಗೆ ಬಿಡದಲೆ ನಮಿಸಿ ॥ ೧ ॥

ಅಧಿಕಾರ ಯೌವ್ವನ ಸಿರಿಯು । ಹದಗೆಟ್ಟ ಅನ್ನ ವಸ್ತ್ರ ಮದವು ।
ಬಂದೊದಗಿದಾಗ ಬಲು ಅರುವು । ಇದ್ದರಂತು ಬಹುಕೀರ್ತಿ ನಿಜವು ॥ ೨ ॥

ಮನೆಗೆಲಸ ಬಿಟ್ಟು ಊರಾ । ಜನಸೇವೆ ಮಾಡ್ವೆವೆಂದು ।
ನಾನ್ಹೆಚ್ಚು ತಾನ್ಹೆಚ್ಚೆಂದು । ಘನತೆಯನು ಮರೆಯುವರಿಂದು ॥ ೩ ॥

ಪತಿಯಾಜ್ಞೆಯನ್ನು ಮೀರಿ । ಸತಿ ಮುಂದೆ ಬಂದರೇನು ।
ಸತಿಪತಿಗಳೊಂದಾಗಿ । ಹಿತದಿಂದ ಮಾಡೆ ಬಲು ಚಲುವು ॥ ೪ ॥

ಬರಿ ಓದ ಕಲಿತರೇನು । ಬರಿಹಾಡ ಕಲಿತರೇನು ।
ಖರೆ ಹಾದಿ ತಿಳಿಯಲಿ ಬೇಕು । ಪರಿಪೂರ್ಣ ಆತ್ಮಜ್ಞಾನ ॥ ೫ ॥

ಗುಣಬೇಕು ವಿದ್ಯೆ ಜೊತೆಗೆ । ಗುಣದಿಂದ ಕೀರ್ತಿ ಜಗದೊಳಗೆ ॥
ಗುಣವಿಲ್ಲದಾ ಬರಿವಿದ್ಯೆ । ಪರಿಮಳವು ಇಲ್ಲದಾ ಪುಷ್ಪ ॥ ೬ ॥

ಸಾಹಿತ್ಯ ಸಮ್ಮೇಲನ ಧಾರವಾಡ
೧೯೪೦ ನೇ ದಿಶಂಬರ

ಗಿರಿಜವ್ವ ಬಸವಪ್ರಭು ಇಚ್ಚಂಗಿಮಠ

ನಾಡದೇವಿಯರ ಗೀತ

ಕಲಿತನದಿ ಕನ್ನಡಿಗರೀಗಾ । ಎದ್ದೇಳಿರಿ ಯುದ್ಧಕೆ ಬೇಗಾ । ಯೆಂಬದಾಟಿ.

ಕನ್ನಡನಾಡಿನ ಮಾತೆಯರೇ । ಕೇಳಿರಿ ನಿಮ್ಮ ವೃತವ ಸುದತಿಯರೇ ॥ ಪ ॥

ಕಿತ್ತೂರು ಚನ್ನಮ್ಮನಾ ಶೌರ್ಯಾ ।
ಬೆಳವಡಿ ಮಲ್ಲಮ್ಮನಾ ಧೈರ್ಯಾ ।
ಝಾನ್ಸಿ ಲಕ್ಷ್ಮಿಬಾಯಿಯಾ ಸ್ಥೈರ್ಯಾ ।
ಕಲಿತು ಕಲಿತನದಿ ಹೋರಾಡಿ । ನಾಡಿನ ಮಾನವ ಕಾಯಿರಿ ನೀವು ॥ ೧ ॥

ಅಕ್ಕ ಮಹದೇವಿಯಾಸ್ಥಿರ ಮುಕ್ತಿ
ಅಕ್ಕ ನೀಲಲೋಚನೆಯ ಶಿವಭಕ್ತಿ ।
ಅಕ್ಕ ಸಾವಿತ್ರಿಯಾ ಘನ ಪತಿಭಕ್ತಿ ।
ಅಕ್ಕರದಿ ಕಲಿತು ಕಂಗೊಳಿಸಿ । ನಾಡಿನಮಾನವ ಕಾಯಿರಿ ನೀವು ॥ ೨ ॥

ಅನಲೆಯಾ ಹೆಳವಗಂಡನ ಸಹವಾಸ ।
ಸೀತೆಯಾ ಪದಿನಾಲ್ಕುವರ್ಷ ವನವಾಸ ।
ಊರ್ಮಿಳೆಯ ಏಕಾಂತ ಆಶ್ರಮವಾಸ ।
ಹಸನಾಗಿ ಕೇಳಿರಿ ನೀವಿನ್ನೂ । ನಾಡಿನಮಾನವ ಕಾಯಿರಿ ನೀವು ॥ ೩ ॥

ಅನುಸೂಯೆಯಾ ಅಗಾಧ ಪತಿಪ್ರೇಮ ।
ಮಂಡೋದರಿಯ ಅದ್ಭುತ ಪತಿಪ್ರೇಮ ।
ತಾರಾಮತಿಯ ಮಿಗಿಲಾದ ಪತಿಪ್ರೇಮ ।
ಆತರದ ಪತಿಪ್ರೇಮವ ಕಲಿತು । ನಾಡಿನ ಮಾನವ ಕಾಯಿರಿ ನೀವು ॥ ೪ ॥

ಜಿಜಾಬಾಯಿಯಂಥ ದಿವ್ಯಮಾತಾ ।
ಅಹಲ್ಯಬಾಯಿಯಂಥ ರಾಣಿಮಾತಾ ।
ಹೇಮರಡ್ಡಿ ಮಲ್ಲಮ್ಮನಂಥ ಶಾಂತಿಮಾತಾ ।
ಆಗಿರಿ ನೀವಿನ್ನು ಮುಂದೆ । ನಾಡಿನ ಮಾನವ ಕಾಯಿರಿ ನೀವು ॥ ೫ ॥

ಕಸ್ತೂರಿಬಾಯಿ ಗಾಂಧಿಯಾ ಜಗಸೇವೆ ।
ಸರೋಜಿನಿ ನಾಯ್ಡುವರ ರಾಷ್ಟ್ರಸೇವೆ ।
ಕಮಲಾದೇವಿ ಇವರ ದೇಶಶೇವೆ ।
ಉಜ್ವಲ ರಾಷ್ಟ್ರಸೇವೆಯ ಮಾಡಿ । ನಾಡಿನಮಾನವ ಕಾಯಿರಿ ನೀವು ॥೬॥

ವಿಜಯಲಕ್ಷ್ಮಿ ಪಂಡಿತರಂಥ ವರಮಂತ್ರಿ ।
ಕಮಲನೆಹರುರಂಥ ಪರಮ ಪತಿವ್ರೈತ್ರಿ ।
ಮಣಿ ಬೆನ್ನರಂಥ ಪಾಟೀಲರ ವರ ಪುತ್ರಿ ।
ಆಗಿ ಕಲಿಯಿರಿ ನೀವಿನ್ನು ಮುಂದೆ । ನಾಡಿನಮಾನವ ಕಾಯಿರಿ ನೀವು ॥೭॥

ಸೊಲ್ಲಾಪುರದ ರುದ್ರಮ್ಮನವರ ಬ್ರಹ್ಮಚರ್ಯ ।
ಶಿವಪಾರ್ವತಮ್ಮ ಇವರ ಶಿವಾಚರ್ಯ ।
ಮಿರಾಬಾಯಿಗಾಂಧಿ ಶಿಷ್ಯಳ ದಿನಾಚರ್ಯ ।
ಕಲಿಯಿರಿ ನೀವಿನ್ನು ಮುಂದೆ । ನಾಡಿನಮಾನವ ಕಾಯಿರಿ ನೀವು ॥೮॥

ಬೆಳಗಾವಿ ಸಾಹಿತ್ಯ ಸಮ್ಮೇಲನ
೧೯೩೯ ಡಿಶಂಬರ

ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ

ಮಾಡುವೆ ಶರಣು

ಮಾಡುವೆ ಶರಣು ಮಾಡುವೆ । ನಮ್ಮ । ಕೂಡಲಸಂಗನ ಶರಣ ಪಾದಕ್ಕೆ ॥ಪ

ಮ್ಯಾದಾರ ಖ್ಯಾತಯ್ಯ ಹಡಪದಪ್ಪಯ್ಯ। ಆಯದಕ್ಕಿ ಮಾರಯ್ಯ ಅಜಗಣ್ಣಗೆ ।
ಮೈದುನ ರಾಮಯ್ಯ ಮಲುಹಣ ಮಡಿವಾಳ। ಮರುಳು ಶಂಕರ
ಸಿದ್ಧರಾಮಯ್ಯಗೆ ॥೧॥

ನನ್ನಯ್ಯ ನಾಗಯ್ಯ ಬೆಂಬಿಡದೆ ಚಾರಮ । ಕಂಬಳಿ ಮರುಳರು ಕಕ್ಕಯ್ಯಗೆ।
ಅನ್ನಪ್ರಸಾದದಿ ವೃದ್ಧವಿಸಿದಾತಗೆ । ಅಂಬಿಗರ ಚೌಡಯ್ಯ ।
ಘನಘಟ್ಟಿವಾಳಗೆ ॥೨॥

ಮಲ್ಲೆ ಬೊಮ್ಮೈಯ್ಯ ಮಧುವರಸ ಬಾಚರಸ। ಬಿಲ್ಲಾಮ ಬಂಕಾದ ಮಾರಯ್ಯಗೆ।
ಬಲ್ಲಾಳ ಗೊಲ್ಲಾಳ ಕನ್ನಪ್ಪ ಕರಿಕಾಮ । ಮೋಳಿಗೆ ಮಾರಯ್ಯ ನುಲಿಯ
ಚಂದಯ್ಯಗೆ ॥ ೩ ॥

ಸತ್ಯಕ್ಕ ಪಿಟ್ಟವ್ವೆ ಶ್ರೀ ನೀಲಲೋಚನೆ । ಮುಃಕ್ತಾಯಿ ಚಂಗಾಳಿ ಗೊಗ್ಗವ್ವೆಗೆ ॥
ಸತ್ತಗಂಡನ ಪಡದು ಹೆತ್ತ ಮಗನಕೊಂದು । ಬತ್ತಾಲೆ ಕದಳಿಯ ಪೊಕ್ಕ
ಮಹದೇವಿಗೆ ॥ ೪ ॥

ಧರಣಿಯೊಳೇಳುನೂರೆಪ್ಪತ್ತು ಅಮರಗಣ । ಅರವತ್ತುಮೂರುಪುರಾತರಿಗೆ ।
ಪರಿ ಪರಿ ಶ್ರೀಗಂಧ ಪುಷ್ಪ ದೂಪಾ ದೀಪ । ಪರಿಪೂರ್ಣದಿಂದಲಿ
ಪ್ರಭುವಿನ ಪಾದಕ್ಕೆ ॥ ೫ ॥

ಶ್ರೀ ಮಹಾದೇವ

ಶ್ರೀ ಮಹಾದೇವಾ ಸಿದ್ಧನಂಜೇಶ । ಸ್ವಾಮಿ ರಕ್ಷಿಸು ಸಂತತಂ ।
ಸ್ವಾಮಿ ರಕ್ಷಿಸು ಸಂತತಂ ಯೆಂದು । ಪ್ರೇಮದಿಂದಲಿ ವರ್ಣಿಪೆ ॥ ಪ ॥ ೧ ॥

ಬೆಳಗಾಗುತಲೆದ್ದು ಶಿವನ ನೆನೆವುತ । ನಲಿದು ಕರಚರಣ ಮುಖಗಳು ।
ನಲಿದು ಕರಚರಣ ಮುಖ ಮೈಗಳಂತೊಳದು । ಬಿಳಿಯ ವಸ್ತ್ರದಲ್ಲೊರಸುತಾ।
॥ ೨ ॥

ನೆಲನ ಸಾರಿಸಿ ರಂಗವಲ್ಲಿಯ ಬರದು । ಬಿಳಿಯ ಕಂಬಳಿ ಗದ್ದುಗೆ ।
ಬಿಳಿಯ ಕಂಬಳಿ ಗದ್ದುಗೆಯಲ್ಲಿ । ಕುಳಿತು ಶಂಕರನ ನೆನೆವುತಾ । ॥ ೩ ॥

ಆಗ ಮೋಕ್ತದಿ ಭಸಿತ ರುದ್ರಾಕ್ಷಿ । ಯೋಗ ಮೈಯೊಳು ಧರಿಸುತಾ ।
ಯೋಗ ಮೈಯೊಳು ಧರಿಸಿ ಚನ್ನಾಗಿ । ಲಿಂಗಾ ನಿತ್ಯವೂ ಧ್ಯಾನಿಸೇ । ॥ ೪ ॥

ಜಾಂಗು ಭಳಿಕೆನುತ ಸಜ್ಜೆಯೊಳಿದ್ದ । ಲಿಂಗಾವ ಕರದೊಳು ।
ಲಿಂಗಾವ ತಂದು ಕರದೊಳುಪಿಡಿದು । ಮಂಗಳವ ಪಾಡುವೇ । ॥ ೫ ॥

ಗಂಗೆ ಗೌತುಮೆ ತುಂಗ ನದಿಗಳ । ಮಂಗಳೋದಕ ಕಲಶದಿಂ ।
ಮಂಗಳೋದಕ ಕಲಶದಿಂ ತಂದು । ಲಿಂಗಕಭಿಷೇಕ ಮಾಡುವೇ । ॥ ೬ ॥

ಅಗರು ಕುಂಕುಮ ಗಂಧ ಕಸ್ತೂರಿ । ಮಿಗಿಲದೆಲ್ಲಾವ ಕೂಡಿದಾ ।
ಮಿಗಿಲದೆಲ್ಲಾವ ಕೂಡಿದಾ ಗಂಧ । ಸೊಗಸಿ ನಿಂದಾಲಿ ಧರಿಸುವೇ । ॥ ೭ ॥

ತಳಗುಲಾಕ್ಷತೆ ತಂಡುಲಾಕ್ಷತೆ । ಬಿಳಿಯ ಎಳ್ಳು ಅಕ್ಷತೆ ।
ಬಿಳಿಯ ಎಳ್ಳು ಅಕ್ಷತೆ ತಂದು । ಚೆಲುವ ಲಿಂಗಯ್ಯ ಗರ್ಚಿಪೇ । ॥ ೮ ॥

ಬಿಳಿಯ ಮಲ್ಲಿಗಿ ಜಾಜಿ ಸಂಪಿಗಿ । ಎಳೆಯ ಬಿಲ್ವಾ ಪತ್ರಿಯಂ ।
ಎಳೆಯ ಬಿಲ್ವಾ ಪತ್ರಿಯಂ ತಂದು । ಹೊಳೆವ ಲಿಂಗಯ್ಯ ಗರ್ಚಿಪೇ ॥ ೯ ॥

ಹಾಲಮಡ್ಡಿಯು ಧೂಪ ಗುಗ್ಗಳ । ಮೇಲು ಮೇಲಾದ ಲೋಬಾನ ।
ಮೇಲು ಮೇಲಾದ ಲೋಬಾನದಿಂದ । ಶೂಲ ಪಾಣಿಯನರ್ಚಿಪೇ ॥ ೧೦ ॥

ಮುತ್ತಿನನಾರುತಿ ರತ್ನದಾರತಿ । ಮತ್ತೆ ಕರ್ಪೂರ ದಾರತಿ ।
ಮತ್ತೆ ಕರ್ಪೂರ ದಾರತಿ ತಂದು । ಚಿತ್ತ ಜಾರಿಗೆ ಎತ್ತುವೆಂ । ॥ ೧೧ ॥

ಬಾಳೆ ಖರ್ಜೂರ ಹಲಸು ನಾರಂಗಿ । ಹಾಲು ಸಕ್ಕರೆ ತುಪ್ಪವಂ ।
ಹಾಲು ಸಕ್ಕರೆ ತುಪ್ಪ ನೈವೈದ್ಯ । ಲೋಲ ಲಿಂಗಯ್ಯ ಗರ್ಪಿಪೇ । ॥ ೧೨ ॥

ಬಾಗೆವಾಡಿ ಅಡಿಕೆ ಒಳ್ಳೆ ಕೆನಿ ಸುಣ್ಣ । ಚಿಗುರಿದಾ ಬಿಳಿಯಲೆ ।
ಚಿಗುರಿದಾ ಬಿಳಿ ಎಲೆಗಳಂ ತಂದು । ಭೋಗಿ ಲಿಂಗಯ್ಯ ಗರ್ಪಿಪೇ ॥ ೧೩ ॥

ಕಾಳೆ ಶಂಖವು ತಾಳ ಜಾಗುಟೆ । ಸುಳಿವ ನಿತ್ಯ ತಾಳಾವು ।
ಸುಳಿವ ನಿತ್ಯ ತಾಳ ವಾದ್ಯಾದಿ । ಶೂಲ ಪಾಣಿಯ ಸರ್ಚಿಪೇ । ॥ ೧೪ ॥

ವೀಣೆ ದಂಡಿಗೆ ಜಾಣ ಕಿನ್ನರಿ । ಮಾಣದೆಲ್ಲವ ಬಾರಿಸಿ ।
ಮಾಣದೆಲ್ಲವ ಬಾರಿಸಿ ಹಾಡಿ । ಗಾನ ಪ್ರಿಯನ ಪೂಜಿಪೆಂ । ॥ ೧೫ ॥

ಮನಸುವಾಚನ ಕಾಯಕರುಣದಿ । ನೆನೆದು ಕೀರ್ತಿಸಿ ಪೂಜಿಸಿ ।
ನೆನೆದು ಕೀರ್ತಿಸಿ ಪೂಜಿಸಿ ನಿತ್ಯ । ಘನ ಮಹಾಲಿಂಗಾವ ಧ್ಯಾನಿಪೇ ॥ ೧೬ ॥

ಮಾತು ಮಾತಿಗೆ ಶಂಕರ

ಮಾತು ಮಾತಿಗೆ ಶಂಕರಾ । ಶ್ರೀ ಗುರುಸ । ರ್ವೋತ್ತುಮನೆನು ಬಾರದೇ ॥ಪ॥

ಜ್ಯೋತಿ ಸಂಗದಿ ಉರಿ । ದ್ಯೋಗ್ನ ಕರ್ಪೂರದಂತೆ । ಪಾತಕರಾಶಿಯು
ಉರಿದು ಹೋಗುವದಾಗಿ ॥ ಅ ॥ ಪ ॥

ಸ್ನಾನಾವ ಮಾಡುವಾಗಾ । ನೇಮದಿ ನಿತ್ಯ । ಧ್ಯಾನಾವ ಮಾಡುವಾಗಾ ।
ಜಾಣ ತನದಿ ಅನ್ನಾ । ಉಂಡು ಗಂಗಾಮೃತ । ಪಾನಾವ ಮಾಡುವ
ಕಾಲದಿ ಮನವೇ ॥೧॥

ಬಿಸಜಾಕ್ಷಿಯರ ನೋಡುವಾಗಾ । ಕೂಡುತ ನಿತ್ಯ । ವಸದು ಮಾತಾಡುವಾಗಾ।
ಬಸಿರಿಲಿ ಬಂದುಸು । ಮಗನ ಮುದ್ದಿಸುವಾಗ । ಹಸನಾದ ವಸ್ತ್ರಂಗಳುಡು
ವಾಗ ಮನವೇ ॥ ೨ ॥

ಸುಲಿವ ಕಳ್ಳನು ಬಂದಾಗಾ । ಘೋರಾರಣ್ಯಾದಿ । ಹುಲಿಕರಡಿ ಬರುವುವಾಗಾ ।
ಚಳಿಜ್ವರ ಕೆಮ್ಮು ಉಬ್ಬಸ ರೋಗ ಬಂದಾಗ । ಮಳೆಗಾಳಿ ಸಿಡಲಿನರ್ಭಟೆ
ದಲ್ಲಿ ಮನವೇ ॥ ೩ ॥

ಬೆಟ್ಟಾವ ನೇರುವಾಗಾ । ಕಾಲ್ಜಾರಿದಲ್ಲಿ । ಥಟ್ಟನೆ ಬೀಳುವಾಗಾ ।
ಅಷ್ಟಭೋಗದಿ ಮನ ಲೋಲುಪ್ತಿ ಪಡಿವಾಗ । ದಟ್ಟದಾರಿದ್ರವು ಬಂದಾಗ
ಮನವೇ ॥ ೪ ॥

ಗುರುಶೇವೆ ಗೈಯ್ಯುವಾಗಾ । ಶ್ರಿ ಗುರು ಕೊಟ್ಟ । ವರಮಂತ್ರ ಜಪಿಸುವಾಗಾ।
ಗುರುವೆ ಗುರುವೆ ಕಲ್ಪ । ತರುವೆ ಪಾಲಿಸು ಯೆಂದು । ಗುರುಮಹಾಲಿಂಗ
ಸಂಗನ ನಂಬಿ ಮನವೇ ॥ ೫ ॥

ರಕ್ಷಿಸೈ

ರಕ್ಷಿಸೈ ಕಾರುಣ್ಯ ಸಿಂಧುವೆ । ರಕ್ಷಿಸೈ ಕುಲಬಂಧುವೆ ।
ರಕ್ಷಿಸೆಮ್ಮನು ಕೈಯ್ಯಬಿಡದೆ । ಪಕ್ಷಪಾತವ ಮಾಡದೆ । ॥ ಪ ॥

ಮಾನ ಪ್ರಾಣಾ ಧನವು ನಿಮ್ಮದು । ಹಾನಿವೃದ್ಧಿಯು ನಿಮ್ಮದು ।
ಜ್ಞಾನ ಮೋಹಜ್ಞಾನ ನಿಮ್ಮದು । ದಾನ ಧರ್ಮವು ನಿಮ್ಮದು । ॥ ೧ ॥

ಭೋಗ ಭಾಗ್ಯಾ ಗುಣವು ನಿಮ್ಮದು । ರಾಗರಸರುಚಿ ನಿಮ್ಮದು ।
ರೋಗ ದುಃಖಾ ಭಯವು ನಿಮ್ಮದು । ತ್ಯಾಗ ಕೃಪಣತೆ ನಿಮ್ಮದು । ॥ ೨ ॥

ಎನ್ನ ಭವದಾರೋಗ ಹರಿಸೋ । ಉನ್ನತದ ಸುಖ ತೋರಿಸೋ ।
ಚನ್ನ ಶ್ರೀ ಗುರುರಂಗಲಿಂಗನೆ । ಎನ್ನ ಹೃತ್ಕಮಲಾಸನೇ । ॥ ೩ ॥

ಗಣನಾಥ

ಗಣನಾಥ ಗೌರಿ ಜಾತಾ । ಜಯ ಬಲವಂತಾ ಸನ್ನುತಾ । ॥ ಜಯ ॥ ಪ ॥

ಓಂಕಾರ ರೂಪ ಶರೀರಾ । ಶಂಖಾವಲಿ ಪರಿಹಾರಾ ।
ಸಂಕೀರ್ಣ ಗುಣಮಣಿಹಾರಾ । ಶುಭಪರಿವಾರಾ ಸುಖಕರಾ ॥ ಶುಭ ॥ ೧ ॥

ಮಣಿಕಾಂತ ಮಂಡಿತ ಮುಕುಟ । ಘನಹಾರ ರಂಜಿತ ಕಂಠ ।
ಮನ ಮೋಹನ ಜಿತ ಮದನಾ । ಶುಭಗುಣ ಸದನಾ ಪಾವನಾ ॥ ಶುಭ ॥ ೨ ॥

ಸಿಂಧೂರ ಶೋಭಿತ ವದನಾ । ಮಂದಾರ ಕುಂದಹರ ಚರಣ ।
ನಂದೀಶ ವಾಹನ ಪ್ರಿಯಾ । ಮಂಗಲ ಕಾಯಾ ಮೋರಯಾ ॥ ಮಂಗಲ ॥ ೩ ॥

ಬೋಧಿಸು ಗುರುದೇವ

ಬೋಧಿಸು ಗುರುದೇವಾನೀಯೆನಗೆ ।
ಭವಾಬ್ಧಿಯ ಗಡದಾಂಟುವ ಪರಿಯನು । ॥ ಪ ॥

ವಿಷಯವಿರಾಗವಾ । ತೊಲಗಿಸಿಯೋಗವಾ ।
ಹಸುಳೆಯು ಕಲಿಯುವಾ ಹೊಸ ಉಪದೇಶವ । ॥ ೧ ॥

ಮಲಪಾಶಗಳನೂ । ಹರಿಸುತ ಸೀನೂ ।
ಮಲಹರ ಪರಿವವನೇ । ಸಲೆ ಪೊರೆಯೆನ್ನನು । ॥ ೨ ॥

ವಿದ್ಯಾ ವಿದ್ಯೆಗ । ಳಾಜ್ಞೆಯ ಕಲಿಯುತ ।
ಹೃದಯ ಚಿದಾತ್ಮದಾ । ಸದ್ಯದರೀತಿಯ । ॥ ೩ ॥

ಗೌರವ ಮುಖ್ಯಸು । ವೀರವ್ರತಂಗಳ ।
ಸಾರವ ಕಲಿಯುವಾ । ಧೀರತೆಯನು ಶಿವಾ । ॥ ೪ ॥

ಅರಭಾವಿ ವಾಸಾ । ಗುರು ಮಹಂತೇಶ ।
ಅರುವಿನೊಳಿರುವ । ವರಸಂಗಮೇಶ । ॥ ೫ ॥

ಗಂಡನೆ ಗುರುವವ್ವ

(ರಾಗ—ಯದಕುಲ—ಕಾಂಬೋಧಿ ಆದಿತಾಳ)

ಗಂಡನೆ ಗುರುವವ್ವಾ ಗಂಡ ದೇವರು ಕೇಳು। ಗಂಡಾನ ಹೊರತೂ ಗತಿಯಿಲ್ಲಾ ।
ಗಂಡಾನ ಹೊರತೂ ಗತಿಯಿಲ್ಲ ಹೆಣ್ಣಿಗೆ । ಗಂಡಾನೆ ಸಕಲಾ ಸೌಭಾಗ್ಯ ॥ ೧ ॥

ನಾರಿ ಗಂಡಾನ ಮಾತಾ ಮೀರಿ ನಡೆಯಲಿ ಬೇಡ। ಸಾರಿ ಹೇಳುವೇನು ಕೇಳವ್ವ।
ಸಾರಿ ಹೇಳುವೆನು ಕೇಳವ್ವ ಪತಿಭಕ್ತಿ । ದಾರಿಯ ಬಿಡಬೇಡ ಕಡೆತನಕ ॥ ೨ ॥

ಗಂಡಾನ ಹೊರತು ಭೂಮಂಡಾಲದೊಳಗಿನ । ಗಂಡಸರು ತನ್ನಾ ಒಡಹುಟ್ಟಿ ।
ಗಂಡಸರು ತನ್ನ ಒಡ ಹುಟ್ಟಿದವರೆಂದು । ಕಂಡವಳೆ ಜಗದಿ ಪತಿವ್ರತೆಯು ॥೩॥

ಗರತಿಗಂಡಾನ ಕೂಡೆ ಮರತೊಮ್ಮೆಯಾವರು । ಸರಿಗಟ್ಟಿ ಮಾತಾ ನಾಡಾಳು ।
ಸರಿಗಟ್ಟಿ ಮಾತಾ ನಾಡಾಳು ಬೈದರೆ। ಗುರುಮಂತ್ರವೆಂದು ತಿಳಿಯುವಳು ॥೪॥

ಹೀನ ಸಿರಿಸಂಪದವ ಏನೊಂದು ಬಯಸದೆ। ಪ್ರಾಣಾದ ಅರಸೆಂದು ಗಂಡನನು ।
ಪ್ರಾಣಾದ ಅರಸೆಂದು ಗಂಡನಾನಂಬಿದ। ಜಾಣೆಯೆ ಜಗಕ್ಕೆ ತಾಯವ್ವ ॥ ೫ ॥

ಮಡುವು ಮುಳುಗಿಸದವ್ವ ಸಡುದು ಬೆಂಕಿಯುಮತ್ತೆ । ಕಡಿಡಾರೆ ಕತ್ತಿ ಹರಿಯದು।
ಕಡಿದಾರೆ ಕತ್ತಿ ಹರಿಯದು ಗರತಿಯ । ಹಿಡಿಯೂವು ಕರಡಿ ಹುಲಿಗುಳು ॥ ೬ ॥

ಗರತಿಯಕಂಡಾರೆ ಹಿರಿ ಹಿರಿ ಹಿಗ್ಗುತೆ । ಕರೆವರು ಮುಂದೆ ಬಾಯೆಂದೂ ।
ಕರೆವರು ಮುಂದೆ ಬಾಯೆಂದು ಶರಣರು । ಹರಸಿ ಹೊಗಳುವರ್ದ್ದರುಷಾದಿ ॥ ೭ ॥

ಜಗದೋದ್ಧಾರನಾ

(ಹಿಂದುಸ್ಥಾನಿ – ಕಾಪಿ— ಆದಿತಾಳ)

ಜಗದೋದ್ಧಾರನಾ । ಆಡಿಸಿದಳೆ ಶೋದಾ । ಜಗದೋದ್ದಾರನಾ ।
ಬಗೆ ಬಗೆಯಿಂದಲಾ । ಆಡಿಸಿದಳೆಶೋದಾ । ಜಗದೋದ್ಧಾರನಾ ॥ ಪ ॥

ನಿಗಮಕೆ ಸಿಲುಕದಾ । ಅಗಣಿತ ಮಹಿಮನಾ ।
ಮಗುಗಳ ಮಾಣಿಕ್ಯನಾ । ಆಡಿಸಿದಳೆ ಶೋದಾ । ॥ ಜಗ ॥ ೧ ॥

ಅರಣೋ ರಣೀಯನಾ । ಮಹತೋ ಮಹೀಮನಾ ।
ಅಪ್ರಮೇಯನಾ । ಆಡಿಸಿದಳೆ ಶೋದಾ । ॥ ಜಗ ॥ ೨ ॥

ಪರಮ ಪುರುಷನಾ । ಪರವಾಸು ದೇವನಾ ।
ಪುರಂದರ ವಿಠಲನಾ । ಆಡಿಸೆದಳೆ ಶೋದಾ । ॥ ಜಗ ॥ ೩ ॥

ಮಾಡು ಶಿವಾರ್ಚನೆ

ಮಾಡು ಶಿವಾರ್ಚನೆಯಾ । ನಿರಂತರ । ಮಾಡು ಶಿವಾರ್ಚನೆಯಾ ॥ ಪ ॥

ಮಿಂದು ಮಡಿಯನುಟ್ಟೊ । ಪದ್ಮಾಸನದೊಳು ಕುಳಿತು ।
ಇಂದು ಧರನ ಭಜಿಸೌ । ಭಕ್ತಿಲಿ ಮನವೇ । ॥ ೧ ॥

ಕರಡಿಗೆಯಿಂದಲಿ । ಪರತರಲಿಂಗವಾ ।
ಕರದೊಳು ತಂದುರೆ । ಮಜ್ಜನವೆಸಗುತೆ । ॥ ೨ ॥

ಪರಮವಿಭೂತಿಯಾ । ಧರಿಸಿ ರುದ್ರಾಕ್ಷಿಯಾ ।
ಕರದೊಳು ಪ್ರೋಕ್ಷಿಯುವಾ । ಮಹೇಶನ ಭಜಿಸುತ । ॥ ೩ ॥

ಎಸೆವ ಸುಗಂಧವಾ । ಮಿಸುಪಾಕ್ಷತೆಗಳ ।
ಕುಸುಮ ಸುಪತ್ರಿಯಾ । ಹಸನಾಗಿ ಧರಿಸುತ । ॥ ೪ ॥

ದೂಪವ ಹಾಕುತಾ । ದೀಪವ ಬೆಳಗುತಾ ।
ಕಾಪಾಲಿ ಧರನೀಗೆ । ಪಾಪವನೀಗೆಂದು । ॥ ೫ ॥

ಪಾಲಯದೇವ

ಪಾಲಯದೇವ ದೇವಾ । ಶರಣೂ ದೇವಾ। ॥ ಪ ॥

ಕಾಲಕರ್ಮವಿದೂರಾ । ಶೀಲ ಸಗ್ಗುಣ ಹಾರಾ ।
ಪಾಲೀತ ಯತಿವರ । ಲೋಲನಿಗಮಸಾರ ದೇವಾ ॥ ಶರಣು ॥ ೧ ॥

ಶಿವಯೋಗ ಭರಿತಾಂಗಾ । ಶಿವರೂಪಾತ್ಮಕಲಿಂಗ ।
ನವಭಾವಾಂಕಿತಪಾಂಗಾ । ಭವನಾಶನ ತುಂಗ ದೇವಾ ॥ ಶರಣು ॥ ೨ ॥

ಸುರಚಿರಥಣಿವಾಸಾ । ಗುರುವರ ಮುರಿಗೇಶಾ ।
ಶರಣು ಸನ್ನುತತೋಷ । ಗುರುಸಿದ್ಧಲಿಂಗೇಶ ದೇವಾ ॥ ಶರಣು ॥ ೩ ॥

ಬಸವರಾಜ

ಬಸವರಾಜ ಪಾಲಿಸಯ್ಯಾ । ಶಶಿಧರನವತಾರಾ ।
ಅಸಮ ಮಹಿಮ ಗಾರ ಭಕ್ತ । ಕುಶಲಭವನಿ ದೂರಾ । ॥ ಪ ॥

ಹಿಂದೆ ನಾನಾ ಜನ್ಮದೊಳು । ಬಂದುನೊಂದೆ ಬಹಳಾ ।
ಮುಂದೆ ಹುಟ್ಟದಂತೆ ನಿಮ್ಮ । ಕಂದಳೆಂದು ಸಲಹೋ । ॥ ೧ ॥

ಜ್ಞಾನ ಹೀನಳಾಗಿ ವಿಷಯ । ಕಾನನದೊಳು ನಾನೂ ।
ಕಾಣಾದೆ ತಿರುಗಿದೆನು ನಿಮ್ಮಾ । ಜ್ಞಾನಪಥವ ತೋರೋ । ॥ ೨ ॥

ಶ್ರೇಷ್ಠ ಘನ ವಿಶೇಷ ಗುಣನೆ । ಕಷ್ಟ ಬಿಡಿಸೊ ಯನ್ನಾ ।
ನಿಷ್ಠೆಯಿಂದ, ಭಜಿಪೆ ನಿಮ್ಮ । ಸೃಷ್ಟಿ ಪರಮಶೀಲಾ । ॥ ೩ ॥

ಕಡೆಗಣ್ಣಿಲಿ

ಕಡೆಗಣ್ಣಿಲಿ ನೀ । ನೋಡದಿರಯ್ಯಾ । ನೋಡದಿರಯ್ಯಾ ।
ಬಿಡದಿರೊ ಕೈಯ್ಯ ॥ ಪ ॥
ಬಡವರ ಬಂಧು । ಬಹು ಕೃಪಸಿಂಧು ।
ಒಡೆಯ ನೀನಲ್ಲದೆ । ಪೊರೆಯುವರಾರೋ । ಪೊರೆಯುವರಾರೋ
ವರಶಿವಯೋಗಿ ॥ ೧ ॥
ನತಜನ ಪಾಲ । ಯತಿಜನಲೋಲ ।
ಗತಿಯು ನೀನಲ್ಲದೆ ಪೊರೆಯುವರಾರೋ । ಪೊರೆಯುವರಾರೋ ।
ವರ ಮುನಿಗೇಂದ್ರ ॥ ೨ ॥
ಅಥಣಿಯವಾಸಾ । ಕೀರ್ತಿವಿಲಾಸ ।
ಮತಿಯು ನೀನಲ್ಲದೆ । ಪೊರೆಯುವರಾರೋ । ಪೊರೆಯುವರೋ
ಗುರು ಬಸವೇಶಾ ॥ ೩ ॥

ಯೋಗಿ ಪಾಲಿಸೈ

ಯೋಗಿ ಪಾಲಿಸೈ । ಶ್ರೀ ಶಿವಯೋಗಿ ಪಾಲಿಸೈ ।
ಯತಿವರ್ಯ । ಧೃತಚರ್ಯ । ನುತಿಸುವೆ ಸತತಂ ॥ ಯೋಗಿ ಪಾಲಿಸೈ ॥ ಪ ॥

ಶಿವಯೋಗ ನಿದ್ರೆಯೊಳಿರುತಿರ್ಪನೆ । ಸುವಿರಕ್ತ ಅಥಣಿಯವಾಸನೆ ।
ಕವಿದಿರ್ಪ ಭವವನ್ನು । ತವೆತವಿಸೆನ್ನನ್ನು ॥ ಯೋಗಿ ಪಾಲಿಸೈ ॥ ॥ ೧ ॥

ಅಷ್ಟ ಮದಂಗಳ ನೋಡಿಸೀ । ದುಷ್ಟಶಿಷ್ಟರಸಮ ಭಾವಿಸೀ ।
ಶ್ರೇಷ್ಠ ಸಧ್ಬಕ್ತರಿಂ । ಗಿಷ್ಟಾರ್ಥ ವಿತ್ತಿಹ ॥ ಯೋಗಿ ಪಾಲಿಸೈ ॥ ॥ ೨ ॥

ಆರು ಭ್ರಮೆಗಳೆನ್ನ ಕೊಲ್ವವ್ರೋ । ಮೂರು ತಾಪಗಳೆನ್ನ ಸುಡುವವ್ರೋ ।
ಸಾರ ಸನ್ಮೋಕ್ಷದ । ಮಾರ್ಗವ ತೋರಿದ ॥ ಯೋಗಿ ಪಾಲಿಸೈ ॥ ॥ ೩ ॥

ಕಾಲನ ಭಯವನ್ನು ಕೇಳುತೆ । ಬಾಲೆಯಂದದೊಳೆನ್ನ ನೋಡುತೆ ।
ಶೂಲಿಯ ನೊಲಿಸಿರ್ಪ । ಶೀಲ ಗುಣ ಸಚ್ಚರಿತ ॥ ಯೋಗಿ ಪಾಲಿಸೈ ॥ ॥ ೪ ॥

ಗುರುವರ ಶರಣರ ಕಾಯ್ದನೇ । ಧರಣಿಯೊಳ್ ಮಹಿಮೆಯ ತೋರ್ದನೆ ।
ಪರಮಾತ್ಮನೊಳಗೊಂಡ । ಮುರಿಗೇಶ ಶ್ರೀಕರ ॥ ಯೋಗಿ ಪಾಲಿಸೈ ॥ ॥ ೫ ॥

ಮಂಗಳಾರತಿ

ಮಂಗಳಾರತಿ ತಂದು ಬೆಳಗಿರಿ । ರಂಗರಾಧನಿಗೆ ॥ ಜಯ ಜಯ ॥
ಮಂಗಳಾರತಿ ತಂದು ಬೆಳಗಿರಿ । ರಂಗ ರುಕ್ಮಿಣಿಗೆ ॥ ॥ ಪ ॥

ಮಧುರ ಪಟ್ಟಣದಿಂದ ಬಂದಾ । ಚದುರ ಕೃಷ್ಣನು ।
ಮಧೂರ ಸ್ತ್ರೀಯರ ಸೀರೆ ಕದ್ದು । ಮರನೇರಿ ಕುಳಿತ ಹರಿಗೆ । ॥ ೧ ॥

ಮಡುವಿನಲ್ಲಿ ಧುಮುಕಿ ಬೇಗಾ । ಒಡಾನೆ ಕೃಷ್ಣನು ।
ಬಿಡದೆ ಕಾಳಿಂಗನ್ಹೆಡೆಯ ಮೆಟ್ಟಿ । ಕಡು ನಾಟ್ಯವಾಡಿದ ಹರಿಗೆ । ॥ ೨ ॥

ಎಲ್ಲಿ ನೋಡಿದಡಲ್ಲಿ ತೋರ್ಪಂಥ । ಬಲ್ಲಿದ ಕೃಷ್ಣನಿಗೇ ।
ಕಾಲ ಕುಣಿಸುತ ಕೊಳಲನುದೂತ । ಬಾಲ ಶ್ರೀಹರಿ ಕೃಷ್ಣಗೆ । ॥ ೩ ॥

ಮಾತನಾಡಯ್ಯ ಶಂಭೋ

ಮಾತನಾಡಯ್ಯ ಶಂಭೋ । ಸೋತು ಬಂದೆವು ನಾವು ।
ಪ್ರೀತಿಯಿಂದಾಲೀ ಇಇಇ । ಮಾತನಾಡೋ ! ನಂಜುಂಡೇಶಾ
ಮನಸು ನೋಡಾದೆ ॥ ಪ ॥

ಕನಸಿನಲ್ಲಿ ನಿನ್ನಾ । ಕಳವಳಿಸೂತ ಬಂದೆ ।
ಮುನಸು ಏತಾಕೋ । ಯನ್ನ ಮೇಲೆ । ನಂಜುಂಡೇಶಾ
ಮನಸು ನೋಡಾದೆ ॥ ೧ ॥

ಕಲ್ಲಿ ಲೊಗದವ ಗೊಲಿದೆ । ಕಾಲಿಲೊದ್ದಾವ ಗೊಲಿದೆ ।
ಬಿಲ್ವನೇರಿಸಿದವಗೆ । ಒಲಿದೆಯುಯ್ಯ । ನಂಬಿದವರಾ । ನಂಜುಂಡೇಶ
ಮನಸು ನೋಡಾದೆ ॥ ೨ ॥

ಅಲ್ಲಿ ಗಿಲ್ಲೀಗಿವಾಸಾ । ನಗರದ ಬಸವೇಶಾ ।
ಎಲ್ಲೆಡೆಯಲ್ಲಿ । ಕೈಲಾಸ । ನಂಜುಂಡೇಶಾ ।
ಮನಸು ನೋಡಾದೆ ॥ ೩ ॥

ಆರತಿಯನು ಎತ್ತಿ

ಆರತಿಯನು ಎತ್ತಿ । ಶ್ರೀ ಗುರುವಿ ಗೊಂದಾರತಿಯನು ಎತ್ತಿ ।
ನೀರೆಯಾರತಿ ಸುಖ । ಆರಾರರಿಯದ । ಮಾರಹರಗೆ ಬೆಳಗಿ । ॥ ಪ ॥

ಮಿಂದು ಮಡಿಯನುಟ್ಟೊ । ನಾವ್ ನಾಲ್ವರು । ತಂದೆ ಶ್ರೀಪರಶಿವಗೆ ।
ಬಂಧುರ ಭರಣ । ನಾಗೇಂದ್ರರಿ ಪತಿಹಿತ । ನಂದವ ಸ್ತುತಿಪರಗೆ । ॥ ೧ ॥

ಅಕ್ಕತಂಗಿಯರೀಗಾ । ನಾಸ್ಕೈವರು । ಮುಕ್ಕಣ್ಣ ಮೂರುತಿಗೆ ।
ಗಕ್ಕನೆ ಚೊಕ್ಕನೆ । ಮಿಕ್ಕಿದಾರತಿ ಎತ್ತಿ । ಅಕ್ಕರಿಂದಾಲಿ ಪಾಡಿ । ॥ ೨ ॥

ತುಪ್ಪದಾರತಿ ಎತ್ತಿ । ನಾವಾರ್ವರು । ಮುಪ್ಪುರ ಭಂಗನಿಗೆ ।
ತಪ್ಪದೆ ಕರ್ಪೂರ । ನಿಪ್ಪತಿ ಉನ್ಮನಿ । ಅಪ್ಪ ಶ್ರೀ ಚನ್ನವೀರಗೆ । ॥ ೩ ॥

ಬೇಗನೆ ಬಾರೋ

ಬೇಗನೆ ಬಾರೋ । ಶಂಕರನೆ । ಬೇಗನೆ ಬಾರೋ ।
ಬೇಗನೆಬಾರೊ। ಮುಖವನು ತೋರೋ । ಭೋಗವನೀಗದ ಯೋಗಿಯೆ
ನೀನು ॥ ಪ ॥

ತೊಡೆಯಲ್ಲಿ ಪಾರ್ವತಿ । ಜಡೆಯಲ್ಲಿ ಶ್ರೀ ಗಂಗೆ ।
ಹೆಡೆಯುಳ್ಳ ಸರ್ಪವು । ಕೊರಳಲ್ಲಿ ಶಿವನೆ ॥ ಬೇಗನೆ ಬಾರೊ । ॥ ೧ ॥

ಉರದಲ್ಲಿ ಶಿರಮಾಲೆ । ಕರದಲ್ಲಿ ತ್ರಿಶೂಲ ।
ಉರಿಗಣ್ಣ ಧರಿಸೀದಿ । ಹಣೆಯಲ್ಲಿ ಶಿವನೇ । ಬೇಗನೆ ಬಾರೊ ॥ ॥ ೨ ॥

ಹಸಿವು ತೃಷೆಗಳಿಲ್ಲ । ವ್ಯಸನಾವು ಮುನ್ನಿಲ್ಲ ।
ಹಸನಾದ ವಸ್ತ್ರವು । ಮೊದಲಿಲ್ಲ ಶಿವನೇ ॥ ಬೇಗನೆ ಬಾರೊ ॥ ॥ ೩ ॥

ಆದಿ ಅಂತ್ಯವು ಇಲ್ಲ । ವ್ಯಾಧಿರೋಗಗಳಿಲ್ಲ ।
ಬೂದಿಯ ಮೈಯುಳ್ಳ । ಮಹದೇವರೊಡೆಯಾ ॥ ಬೇಗನೆ ಬಾರೊ ॥ ॥ ೪ ॥

ಜನನ ಮರಣವಿಲ್ಲ । ಜನಸೀದ ತಾಯಿಲ್ಲ ।
ಮನದೊಳು ಮನೆ ಮಾಡೊ । ಚಿನುಮಯ ಶಿವನೆ ॥ ಬೇಗನೆ ಬಾರೊ॥ ॥ ೫ ॥

ವಸುಧೆಯೊಳಗ್ಗೊ ವಿನಕೋವಿ । ಬಸವ ದಂಡೇಶನೆ ।
ಹಸನಾಗಿ ಸ್ತುತಿಸುವೆ । ಪಾಲಿಸುನಾಥಾ ॥ ಬೇಗನೆ ಬಾರೊ ॥ ॥ ೬ ॥

ಗಿರಿಜಮ್ಮ ಬಸವಪ್ರಭು ಇಜ್ಜಂಗಿಮಠ

ನವ ಸ್ತ್ರೀ ಪದ್ಧತಿ

ದಾಟಿ :— ಲಾವಣಿಯಂತೆ

ಎಂಥ ಕಾಲ ಬಂತ್ರಿಯವ್ವ । ಎಂದು ನಮ್ಮವ್ವ ಹೇಳ್ತಾಳ್ರಿ ।
ಇಂಥದ್ದೆಲ್ಲ ಇದ್ದಿಲ್ರವ್ವ । ನಮ್ಮಕಾಲಕೆ ಅಂತಾಳ್ರಿ । ‖ ೧ ‖

ಹೊತ್ತು ಏರಿದರು ಏಳೊದಿಲ್ರಿ । ಈಗಿನ ನಮ್ಮ ಹುಡಿಗೇರ್ರಿ ।
ಮುತ್ತಿನಂಥ ಮಾತ ಹೇಳಲು । ಥಟ್ಟನೆ ಸಿಟ್ಟಗೇಳ್ತಾರ ॥ ‖ ೨ ‖

ಎಂಟಕೆ ಎದ್ದು ಗಂಟೆನೋಡಿ । ಗಂಟುಮಾರೆ ಹಾಕ್ತಾರಿ ।
ಗಂಟೆಗೆ ಸ್ವಲ್ಪವು ಬುದ್ಧಿಯಿಲ್ಲ । ಎಬ್ಬಿಬಿಡ್ತು ಅಂತಾರ್ರಿ ॥ ‖ ೩ ‖

ಹೊರಗಡೆಗಿರಗಡೆ ಹೋಗೊದಿಲ್ರಿ । ಹಲ್ಲುಗಿಲ್ಲು ತಿಕ್ಕೊದಿಲ್ರಿ ।
ಮಾರಿಮಾತ್ರ ತೊಳಿತಾರೊ ಇಲ್ಲೊ । ಪಾವಡರಸ್ನೋ ಹಚ್ತಾರ್ರಿ ॥ ‖ ೪ ‖

ಜಾರ ಜೆಟ್ಟ ಸೀರೆ ನುಟ್ಟು ಬಾಡಿ । ಚಂಪರ ಬ್ಲೌಜ ತೊಡ್ತಾರ್ರಿ ।
ನಾರುತಿದ್ದರು ಅತ್ತರ ರೋಜ । ಹಚ್ಚಿ ಜಳಕ ಬಿಡ್ತಾರ್ರಿ ‖ ೫ ‖

ಅಡ್ಡ ಬೈತಲೆ ತೆಗೆದು ತಾವು । ನಾಡಿನ ಏಳಿಗೆ ಮರ್ತಾರ್ರಿ ।
ಅಡ್ಡ ಬಿದ್ದು ಹೇಳ್ತೆವೆಂದ್ರು । ಅಡ್ಡ ಬೈತಲೆ ಬಿಡೊದಿಲ್ರಿ ॥ ‖ ೬ ‖

ಪಕ್ಷಿಯಂತೆ ಪಕ್ಕ ಉಬ್ಬಿಸಿ । ಪುಕ್ಕಗಿಕ್ಕ ತಗಿತಾರ್ರಿ ।
ಪುಕ್ಕದ ಕೂದಲ ಕಿವಿಯ ಮುಚ್ಚಿ । ತುಟಿಗೆ ಬಣ್ಣ ಹಚ್ತಾರ್ರಿ ॥ ‖ ೭ ‖

ಹೇರಪಿನ್‌ಗೀರಪಿನ್ ರಿಬ್ಬನ್‌ಗಿಬ್ಬನ್ । ಕೂದಲಿಗಂತ ಹಾಕ್ತಾರ ।
ತುರುಬಿಗೆ ಇಪ್ಪತ್ ಅಕ್ಷಯೆಂತ । ಮೇಲೆ ಮತ್ತೆ ಚುಚ್ತಾರ್ರಿ ॥ ‖ ೮ ‖

ಲೇಡಿ ಜನರ ನೋಡಿ ತಾವು । ಎರಡು ಜಡೆಯು ಹಾಕ್ತಾರ್ರಿ ।
ಲೇಡಿ ಜನರ ಕಂಡು ತಾವು । ಕೂದಲ ಕಟ್ಟ ಮಾಡ್ತಾರ್ರಿ ॥ ‖ ೯ ‖

ಮಾಡಿ ಬದ್ಕುಕ ಉಣ್ಣಿರೆಂದ್ರೆ । ನಾವ್ಯಾಕ ಮಾಡ್ಬೇಕಂತಾರ್ರಿ ।
ಗೊಡ್ಡು ಹರಟೆಹೊಡೆದು ಕಾಲ । ವ್ಯರ್ಥ ಜನ್ಮ ಕಳಿತಾರ್ರಿ ॥ ॥ ೧೦ ॥

ಹೊರಗೆ ಮೈಯೆಲ್ಲ ಕಾಣುವಂಥ । ಬಾಂಡು ಪತ್ತಲ ಉಡುತಾರ್ರಿ ।
ಇರಕಲ್ಲ ಸೀರೆ ಖಾದಿ ಸೀರೆ । ಒಜ್ಜೆ ಯಾಗ್ತವು ಅತಾಂರ್ರಿ ॥ ॥ ೧೧ ॥

ಹೊಟ್ಟೆ ಹಸ್ತರೆ ರೊಟ್ಟಿ ಪಲ್ಯ । ಅನ್ನ ಸಾರು ಒಲ್ಲೆ ಅಂತಾರ್ರಿ ।
ಪೇಟೆ ಬ್ರೆಡ್ಡು ಕೇಕು ಬನ್ನು । ಚಹ ಕಾಫಿ ಬಯಸ್ತಾರ್ರಿ ॥ ॥ ೧೨ ॥

ಸಾಲಿಯೆಂದ್ರೆ ಲೀಲೆಯಿಂದ । ಜೋಕಿನಿಂದ ಹೋಗ್ತಾರ್ರಿ ।
ಕೆಲಸ ಅಂದ್ರೆ ಜೋಲಿ ಹೊಡದು । ಮೂಲಿಹಿಡಿದು ಮಲಗ್ತಾರ್ರಿ ॥ ॥ ೧೩ ॥

ಕುಟ್ಟಾಕ್ವಲ್ರಿ ಬೀಸಾಕ್ವಲ್ರಿ । ನೀರು ಜಗ್ಗಿ ದಣಿಯಾಕ್ವಲ್ರಿ ।
ನಾಟಕ ಸಿನೇಮ ಅಂದ್ರೆಗಿಂದ್ರೆ । ಹಿಗ್ಗಿ ಹಿಗ್ಗಿ ಜಿಗಿತಾರ್ರಿ ॥ ॥ ೧೪ ॥

ಭಯ ಭಕ್ತಿ ತೋರೋದಿಲ್ರಿ । ಗುರುಗಳ ಹಿರಿಯರ ಕಂಡಾರೆ ।
ನಯ ವಿನಯ ಮರತು ಬಿಟ್ಟು । ಬಿರಸು ಮಾತ ಕಲ್ತಾರ್ರಿ ॥ ॥ ೧೫ ॥

ಕುಂಕುಮ ಬಟ್ಟು ಅಳಿಸಿ ಬಿಟ್ಟು । ಸಾದಿನ ಬಟ್ಟು ಇಡ್ತಾರ್ರಿ ।
ಕುಂಕುಮ ಇಟ್ರೆ ಸಾಸುವೆಯಷ್ಟು । ತಿದ್ದಿ ಸಣ್ಣಗೆ ಹಚ್ತಾರ್ರಿ ॥ ॥ ೧೬ ॥

ಅಕ್ಕೈಲೊಂದೆ ಈಕ್ಕೈಲೊಂದೆ । ತರತರ ಬಳೆಗಳ ನಿಡ್ತಾರ್ರಿ ।
ಫಕ್ಕನೆ ಒಡೆದರೆ ಬೋಳ ಕೈಗೆ । ಬಳೆಗಳ ತಾವು ತೊಡಸ್ತಾರ್ರಿ ॥ ॥ ೧೭ ॥

ಕಣ್ಣು ಕಾಣದ ಮುದುಕರು ತಾವು । ಕಣ್ಣಿಗೆ ಚಾಳೀಸ ಹಾಕ್ತಾರ್ರಿ ।
ಕಣ್ಣು ಕಂಡರು ಹುಡಿಗೇರು ಸಹ । ಕಣ್ಣಿಗೆ ಚಾಳೀಸಹಾಕ್ತಾರ್ರಿ ॥ ॥ ೧೮ ॥

ಹೊತ್ತು ನೆತ್ತಿಯ ಏರಿದ್ದಂಗೆ । ವೇಳೆ ಎಷ್ಟೆಂದು ತಿಳಿತಿದ್ರಿ ।
ಹತ್ತು ಹೊಡೆದರು ತೊತ್ತಿಲ್ಲ ಹುಡಿಗೆರು । ಕೈಗೆ ರಿಸ್ಟವಾಚ ಕಟ್ತಾರ್ರಿ ॥ ॥ ೧೯ ॥

ಅತ್ತಿ ಸೇವಾ ಮಾವನ ಸೇವಾ । ನಾವ್ಯಾಕ ಮಾಡಬೇಕಂತಾರ್ರಿ ।
ಅತ್ತಿಗೆ ನಾದಿನಿ ನೆಗೆಯೆಣ್ಣಿರ್ರೊಡೆ । ನಾವ್ಯಾಕಿರಬೇಕಂತಾರ್ರಿ ॥ ॥ ೨೦ ॥

ಗಂಡನ ಕರಕೊಂಡಾರಾಮ ಬೇರೆ । ಇರಬೇಕೆಂತ ಹೇಳ್ತಾರ್ರಿ ।
ಗಂಡ ಸಾಹೇಬದಾನೆ ನಮಗೆ । ಬಾಯಿಸಾಹೇಬನಬೇಕಂತಾರ್ರಿ ॥ ॥ ೨೧ ॥

ಅಡಿಗೆ ಗಿಡಿಗೆ ಮಾಡೋದು ಬೇಡ । ಹೋಟಲಡಿಗೆ ತರಸನಂತಾರ್ರಿ ।
ಒಡನೆ ಮೋಟಾರ ಹತ್ತಿಕೊಂಡು । ವಾಕಿಂಗ್ಹೋಗೊನಂತಾರ್ರಿ ॥ ॥ ೨೨ ॥

ಬಹಳ ಮಕ್ಕಳ ಹಡವರೆ ತಮಗೆ । ತಿಟ್ಟೆಯಾಗ್ತದು ಅಂತಾರ್ರಿ ।
ಬಹಳ ಹೇಳಲೇನು ಭರ್ತ । ಕಂಟ್ರೋಲ ಮಾಡ್ಸಿಕೊಳ್ತಾರ್ರಿ ॥ ॥ ೨೩ ॥

ಬಿ. ಎ. ಎಂ. ಎ. ಡಿಗ್ರಿ ಪಡದು । ನೌಕ್ರಿ ಮಾಡಬೇಕಂತಾರ್ರಿ ।
ಬಿ. ಎ. ಎಂ. ಎ. ಆದ ಗಂಡ । ಸಿಕ್ಕರೆ ಬಲುಬೇಸಂತಾರ್ರಿ ॥ ॥ ೨೪ ॥

ದೊಡ್ಡವರ ಮನಿಯಾಗ ಬ್ಯಾನಿ ಬಹಳ । ದಿನದಿನ ಔಷಧ ಕುಡಿತಾರ್ರಿ ।
ದುಡಿದು ಉಂಡರೆ ಬ್ಯಾನಿಯಿಲ್ಲ । ಡಾಕ್ಟರ್ಗೆ ರೊಕ್ಕ ಸುರಿತಾರ್ರಿ ॥ ॥ ೨೫ ॥

ಹಳ್ಳಿ ಹೆಂಗಸ್ರ ನೋಡ್ರಿ ಗಾಳಿ । ಬಿಸಿಲಾಗ ಹತ್ತಿ ಬಿಡಸ್ತಾರ್ರಿ ।
ಗಾಳಿಯೊಳಗೆ ಅಡ್ಡಾಡರ್‍ರೆಂದ್ರೆ । ಮನೆಯೋಳ್ಪಂಕ ಬಯಸ್ತಾರ್ರಿ ॥ ॥ ೨೬ ॥

ದೊಡ್ಡವರೆಂದು ಹೋದಲ್ಲಿ ಬಂದಲ್ಲಿ । ಕುರ್ಚಿ ತಾವು ಬಯಸ್ತಾರಿ ।
ದಡ್ಡರು ಬಂದರೆ ಬಡವರು ಬಂದರೆ । ಮೂಲಿಗೆ ಅವರ ಒತ್ತಾರ್ರಿ ॥ ॥ ೨೭ ॥

ಹುಡುಗರು ಹುಡಿಗೇರು ಕೂಡಿಕೊಂಡು । ಕಾಲೇಜಂತ ಕಲಿತಾರ್ರಿ ।
ತುಡಿಗಿನಿಂದ ಹಿರಿಯರ ಕೇಳದೆ ತಾವೆ ಲವ್ ಮ್ಯಾರೇಜಾಗ್ತಾರ್ರಿ ॥ ॥ ೨೮ ॥

ಹುಡುಗರಂತೆ ಹುಡಿಗೇರು ಕೂಡ । ಚಹದಂಗಡಿಗೆ ಹೋಗ್ತಾರ್ರಿ ।
ಹುಡುಗರಂತೆ ಕೋಟು ಹ್ಯಾಟು । ಬೂಟು ತಾವು ತೊಡ್ತಾರ್ರಿ ॥ ॥ ೨೯ ॥

ಗಂಡನ ಕೂಡ ಮುಂಬೈಯಿಂದ । ಕಾಲಿಗೆ ಚಪ್ಪಲ ತರಸ್ತಾರ್ರಿ ।
ಗಂಡ ನಿಂತ್ರೆ ಕುರ್ಚಿ ಮೇಲೆ । ಕಾಲ್ಮೇಲೆಕ್ಕಾಲ್ಹಾಕಿ ಕುಂಡ್ರುತಾರ್ರಿ ॥ ॥ ೩೦ ॥

ಗಂಡ ಅಂದ್ರೆ ಗೊಂಬಿ ಮಾಡಿ । ಹೇಳಿದ್ಹಂಗೆ ಕೇಳ್ಹಂಗೆ ಮಾಡ್ತಾರ್ರಿ ।
ಗಂಡ ದೇವರೆಂಬ ಭಕ್ತಿ । ಮರೆತು ತಾವು ಬಿಟ್ಟಾರ್ರಿ ॥ ॥ ೩೧ ॥

ಅತ್ತೆಯು ಮನೆಯೊಳಡಿಗೆ ಮಾಡಿ । ಮಣೆಯ ಹಾಕಿ ಇರ್ತಾಳ್ರಿ ।
ಇತ್ತ ಸೊಸೆಯು ಲೆಕ್ಚರ ಹೇಳಿ । ಊಟಕೆ ತಾನು ಬರ್ತಾಳ್ರಿ ॥ ॥ ೩೨ ॥

ಕಲ್ತವರ್ಗಿಂತ ಕಲಿಯದ ಹೆಂಗಸು । ದಿಮಾಕ ಬಹಳ ಮಾಡ್ತಾರ್ರಿ ।
ಕಲ್ತಿಲ್ಲೇನು ನಮ್ಮ ಗಂಡ್ರು । ಬಿ. ಎ ಎಂ. ಎ. ಎಲ್ ಎಲ್. ಬಿ ॥ ॥ ೩೩ ॥

ಅನಲಾಯಿ ಅನುಸೂಯ ಸೀತೆ ತಾರಾ । ಅವರ ನಡತೆ ಹೇಗಿತ್ರಿ ? ।
ಚನ್ನಮ್ಮ ಮಲ್ಲಮ್ಮ ನೀಲಮ್ಮ ಮಹದೇವಿ । ಕೀರ್ತಿ ಈಗಲು ನಿಂತೈತ್ರಿ ॥ ೩೪ ॥

ಟೀಕಗೀಕ ಮಾಡಿಲ್ಲ ನಾನು । ಇದ್ದದ್ದ ಇದ್ದಂಗ್ಹೇಳೇನ್ರಿ ।
ಅಕ್ಕರದಿಂದ ಕೇಳಿರಿ ನೀವು । ಸಿಟ್ಟಿಗೆಮಾತ್ರ ಏಳಬ್ಯಾಡ್ರಿ ॥ ॥ ೩೫ ॥

ಕಂಡ ಮಾತ ಕಂಡಂಗಾಡೆ । ಕೆಂಡದಂಗೆ ಆಗ್ತೀರಿ ।
ಖಂಡಿತ ಇವರೊಳು ಕಸರು ಇದ್ದರೆ । ಕೈಯ್ಯ ಹಿಡಿದು ಕೇಳೀರಿ ॥ ॥ ೩೬ ॥

ಅವ್ವ ಈಗಿನವರ ನಡತಿ । ಒಂದು ಬಿಡದೆ ಹೇಳಿದಿರಿ ।
ಅವ್ವ ನಿಮ್ಮ ಕಾಲದ ನಡತಿ । ನಾನು ಸ್ವಲ್ಪ ಹೇಳ್ತೇನ್ರಿ ॥ ॥ ೩೭ ॥

ಹಲ್ಲಿಗೆ ಹಲ್ಲಿಟ್ಟು ಹಚ್ಚಿಕೊಂಡು । ಹಲ್ಲು ಕರ್ರಗೆ ಮಾಡತಿದ್ರಿ ।
ಕಾಲಿಗೆ ಪಂಚೇರು ನರಪಳಿ ಪೈಜಣ । ಸುರುಳಿ ಪಿಲ್ಲಿ ಇಡತಿದ್ರಿ ॥ ॥ ೩೮ ॥

ಕೈಗೆ ಹಣಿಗೆ ಗದ್ದಕೆ ಗಲ್ಲಕೆ । ಹಚ್ಚಿಬಟ್ಟ ಹೊಯ್ಸ್ತಿದ್ರಿ ।
ಕೈಗೆ ಕಡಗ ಬೇಡಿ ಮುಂಡ । ಮೊಳಕೈ ಬಳೆ ಇಡತಿದ್ರಿ ॥ ॥ ೩೯ ॥

ಮುಟ್ಟಿ ಮುಟ್ಟಿ ಎಂದು ಶೀಲ । ಮಾಡಿ ಜಗವು ಜೀಳತಿದ್ರಿ ।
ಬಟ್ಟಮಾಡಿ ಹೇಳಿವೆಂದ್ರೆ । ಸಾಲಿಗೆ ಸಲಾಮು ಹೊಡೆದಿದ್ರಿ ॥ ॥ ೪೦ ॥

ಕತ್ತಲ ಕೋಣೆಯಲ್ಲಿ ತುರುಕಿ । ಬಾಣಂತಿತನ ಮಾಡತಿದ್ರಿ ।
ಹೆತ್ತವ್ವಗಳಿರ ನಿಮ್ಮ ತಪ್ಪ । ಎಣಿಸಲು ನಾನು ಸಣ್ಣಾವಳ್ರಿ ॥ ॥ ೪೧ ॥

ಒಟ್ಟಿಗೆ ನಾನು ಹೇಳುವದಿಷ್ಟೆ । ಹೊತ್ತಾರೆದ್ದು ಪತಿಗೆ ವಂದಿಸಿರಿ ।
ನೆಟ್ಟಗೆ ಜೈತಲೆ ತೆಗೆದು ಅರಿಷಣ । ಕುಂಕುಮ ಹೂವ ಮುಡಿಯಿರಿ ॥ ॥ ೪೨ ॥

ಅತ್ತಿ ಮಾವ ಭಾವ ಮೈದುನ । ಶೇವಾ ಭಕ್ತಿಲಿ ಮಾಡೀರಿ ।
ಹೊತ್ತಿಗೆ ಸರಿಯಾಗಡಿಗೆ ಮಾಡಿ । ಉಂಡು ಸಧೃಡಾರಾಗೀರಿ ॥ ॥ ೪೩ ॥

ಬಹಳ ಹೇಳೊದಿಲ್ಲ ನಿಮಗೆ । ದೇವಿ ಸ್ವರೂಪರಾಗೀರಿ ।
ಇಹದೋಳ್ ಕೀರ್ತಿ ಪರದೋಳ್ ಮುಕ್ತಿ । ಬಿಡದೆ ನೀವು ಪಡೆಯಿರಿ ॥ ॥೪೪॥

ಬೆಳಗಾವಿ ಸಾಹಿತ್ಯ ಸಮ್ಮೇಲನ
೧೯೩೯ ಡಿಶಂಬರ

ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ

ಹಸೆಗೆ ಕರೆಯುವ ಹಾಡುಗಳು

ನಗುತ ನಗುತ

ನಗುತ ನಗುತ ಬಾರೆ ಬೇಗಾ । ಝುಗ ಝುಗಿಸುವ ಹಸೆಗೆ ಈಗಾ ॥
ರಘು ರಾಮರ ಪ್ರಾಣರಮಣೀ । ಅಗಣಿತ ಸೌಭಾಗ್ಯದಾಯಿನಿ ॥ ಪ ॥

ಹರುಷದಿಂದ ಜನಕ ಭೂಪಾ । ವಿರಚಿಸೆ ಘನ ಯಾಗವನ್ನೂ ।
ಧರಣಿಯ ಶೋಧನೆಯ ಮಾಡಲು । ದೊರಕಿದಳ್ ಶ್ರೀ ಜಾನಕಿದೇವಿ ॥ ೧ ॥

ಭರದಿ ರಾಘವೇಂದ್ರ ಬಂದೂ । ಹರನ ಧನುಸ ನೆತ್ತಲಂದೂ ।
ಕೊರಳೀಗ್ಹಾರವನ್ನು ಹಾಕೀ । ಕರವ ಪಿಡಿದಳ ತರುಣಿ ಜಾತೆ ॥ ೨ ॥

ಮಣಿದು ಬೇಡಲಾಗ ಚೂಡಾ । ಮಣಿಯ ಮರತು ತನಯಳಾಗಾ ।
ರಣಾದಿ ಅಸುರರ ಗೆಲಿಸಿದಂಥಾ । ಗುಣನಿಧಿ ಶ್ರೀ ಜಾನಕಿದೇವಿ ॥ ೩ ॥

ಭಾಗ್ಯದ ಲಕ್ಷ್ಮೀ

ಭಾಗ್ಯಾದ ಲಕ್ಷ್ಮಿ ಬಾರಮ್ಮ। ಅಮ್ಮಮ್ಮ ನೀ। ಭಾಗ್ಯಾದ ಲಕ್ಷ್ಮೀ ಬಾರಮ್ಮ ॥ಪ॥

ಗೆಜ್ಜೆ ಕಾಲ್ಗಳಧ್ವನಿಯ ತೋರುತ । ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ ।
ಸಜ್ಜನ ಸಾಧು ಪೂಜೆಯ ವೇಳೆಗೆ । ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥ ೧ ॥

ಕನಕ ವೃಷ್ಟಿಯ ತ್ರಂತದಿ ಕರದು । ಮನಕೆ ಮನನ ಸಿದ್ಧಿಯ ಮಾಡಿ ।
ದಿನಕರ ಕೋಟಿ ತೇಜದಿ ಹೊಳೆವ । ಜನಕ ರಾಜನ ಕುಮಾರಿ ಬಾರೆ ॥ ೨ ॥

ಅತ್ತಿತ್ತಗಲದೆ ಭಕ್ತರ ಮನೆಯಲಿ । ನಿತ್ಯ ಮಹೋತ್ಸವ ನಿತ್ಯ ಸುಮಂಗಳೆ ।
ಸತ್ಯವ ತೋರುತ ಸಜ್ಜನರಗಲದೆ । ಚಿತ್ತದಿ ಹೊಳೆವ ಪುತ್ಥಳಿ ಬಾರೆ ॥ ೩ ॥

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು । ಕಂಕಣ ಕೈಯ್ಯ ತಿರುವುತ ಬಾರೆ ।
ಕುಂಕುಮಾಂಕಿತ ಪಂಕಜಲೋಚನೆ । ವೆಂಕಟರಮಣನ ರಾಣಿಯೆ ಬಾರೆ ॥೪॥

ಸಕ್ಕರೆ ತುಪ್ಪ ಕಾಲುವೆ ಹರಿಸಿ । ಶುಕ್ರವಾರದ ಪೂಜೆಯ ವೇಳೆಗೆ ।
ಅಕ್ಕರವುಳ್ಳ ಅಲಗಿರಿವಾಸನ । ಚೊಕ್ಕ ಪುರಂದರ ವಿಠಲನ ಪ್ರಿಯೆ ॥ ೫ ॥

ವಜ್ರದ ಹಸೆಗೆ

ವಜ್ರದ ಹಸೆಗೆ ಬಾರೋ । ಗೋಪಿಯಾ ಕಂದಾ ॥ ॥ ಪ ॥

ಹುಟ್ಟಿದ್ದು ಮಥುರೆಯು । ಬೆಳೆದದ್ದು ಗೋಕುಲಾ ।
ದಿಟವಾಗಿ ಜಲಕ್ರೀಡೆ । ನಾಡಿದ್ದು ಯಮುನಾತೀರಾ ॥ ಗೋಪಿ ॥ ॥ ೧ ॥

ಕಾಸಿ ಪೀತಾಂಬರಾ । ಕೈಯಲ್ಲಿ ಶ್ರೀ ಕೊಳಲು ।
ಪೂಸಿದ ಶ್ರೀಗಂಧ । ಮೈಯೊಳು ಘಮ ಘಮಾ ॥ ಗೋಪಿ ॥ ॥ ೨ ॥

ಎಡದಲ್ಲಿ ಶ್ರೀದೇವಿ । ಬಲದಲ್ಲಿ ಭೂದೇವಿ ।
ನಡುವೆ ಶ್ರೀ ಪರಮಾತ್ಮ । ಕೂಡಿ ಪಾಡುವರೆಲ್ಲ ಬಾರೋ ॥ ಗೋಪಿ ॥ ೩ ॥

ಏನು ಮಾಯಾ

ಏನು ಮಾಯಾ ಮಾಡಿದಾನೆ । ಎಂಥ ಜಾಣನೇ । ಸಖೀ ಇಇನಿ ॥ ಏನು ॥ ಪ ॥
ಗೊಲ್ಲತೀಯರ ಮನೆಯ ಪೊಕ್ಕು । ಮೊಸರ ಕುಡಿದಾನೇ ।

ಮೊಸರ ಕುಡಿದು ಗಡಿಗೆ ಒಡೆದು । ಓಡಿ ಪೋದಾನೇ । ಸಖೀ ॥ ಏನು ॥ ೧ ॥

ಕಾಳಂದೀಯರಾ ನಡುವ ಧುಮುಕಿ । ಹೆಡೆಯ ತುಳಿದಾನೇ ।
ಹೆಡೆಯ ತುಳಿದು ನಾಂಟ್ಯ ನಾಡಿ । ಓಡಿ ಪೋದಾನೆ । ಸಖೀ ॥ ಏನು ॥ ೨ ॥

ಹೂವಿನ ಕೊಳಲ ಕೈಯ್ಯಲ್ಪಿಡಿದು । ಊದೂತ ಬಂದಾನೇ ।
ಊದೂತ ಬಂದು ಮರವನೇರಿ । ಮಾಯವಾದನೇ । ಸಖೀ ॥ ಏನು ॥ ೩ ॥

ಆರತಿಯು ಮಾಡು ಬಾರೆ

ಆರತಿಯ ಮಾಡು ಬಾರೆ । ಆರತಿಯ ಮಾಡು ಬಾರೆ ।
ಆರತಿಯ ಮಾಡು ಬಾರೆ । ರಾಮಚಂದ್ರಗೆ । ಸಖಿಯೇ ॥ ರಾಮಚಂದ್ರಗೆ ॥ ಪ ॥

ಮಾತೆ ವಾಕ್ಯವನ್ನೇ ಕೇಳಿ । ಮಾತೆ ವಾಕ್ಯವನ್ನೇ ಕೇಳಿ ।
ಸೀತೆ ಸಹಿತ ವನಕೆ ಪೋದ। ರಾಮಚಂದ್ರಗೆ । ಸಖಿಯೇ ॥ ರಾಮಚಂದ್ರಗೆ ॥ ೧ ॥

ವಿಮಲ ಕರುಣ ಶೀಲನೀಗೆ । ವಿಮಲ ಕರುಣ ಶೀಲನೀಗೆ ।
ವಿಮಲ ಸುಜನ ಪಾಲನೀಗೆ । ತಾರೆ ಬೇಗನೆ । ಸಖಿಯೇ ॥ ಮಾಡುಆರತಿ ॥ ೨॥

ಶಂಖು ಚಕ್ರಧಾರನೀಗೆ । ಶಂಖು ಚಕ್ರಧಾರನೀಗೆ ।
ಪಂಕ ಜಾಕ್ಷಪ್ರಿಯನೀಗೆ । ಮಾಡು ಆರತಿ । ಸಖಿಯೇ ॥ ಮಾಡುಆರುತಿ ॥ ೩ ॥

ತಂಗಿಯರೆ

ತಂಗಿಯರೇ ಆಚಾರಾ । ದಿಂಗಿತವ ತಿಳಿರವ್ವಾ ।
ಬಂಗಾರಕಿಂತ । ಆಚಾರು ಮೇಲು ॥ ತಂಗಿಯರೆ ॥ ॥ ಪ ॥

ಆಚಾರ ವೆಂಬುವದೇ । ಆರೋಗ್ಯವಾಗಿಹುದು ।
ವಿಚಾರದಿಂದಲಿ । ಆಚಾರ ಮಾಡಿರಿ ॥ ತಂಗಿಯರೆ ॥ ॥ ೧ ॥

ಉದಯ ಕಾಲದೊಳೆದ್ದು । ಮೊದಲು ಶೌಚಕೆ ಹೋಗಿ ।
ಬೂದಿಯ ಹಚ್ಚಿ । ಕೈಗಳ ತೊಳೆಯಿರಿ ॥ ತಂಗಿಯರೆ ॥ ॥ ೨ ॥

ಹಲ್ಲುಗಳ ಬೆಳಗಿರಿ । ಝುಳಝುಳನೆ ಪ್ರತಿದಿನವು ।
ನಿಲ್ಲಾದೆ ತೊಳೆಯಿರಿ । ಚೆಲುವಿಕೆ ಮೋರೆಯು ॥ ತಂಗಿಯರೆ ॥ ॥ ೩ ॥

ಸ್ನಾನಾವ ಮಾಡಿರಿ । ಚೆನ್ನಾಗಿ ಹೊಲಸಿರದೆ ।
ಧ್ಯಾನಾವ ಮಾಡಿರಿ । ಮನದೊಡೆಯನ ನೀವು ॥ ತಂಗಿಯರೆ ॥ ॥ ೪ ॥

ಕಸವನ್ನು ಮನೆಯೊಳಗೆ । ಹಸನಾಗಿ ಗುಡಿಸವ್ವ ।
ಹಸನಾಗಿ ಸಾರಿಸು । ಬಸವಗೋಮಯದಿ ॥ ತಂಗಿಯರೆ ॥ ॥ ೫ ॥

ಥಳಥಳನೆ ಹೊಳೆವಂತೆ । ಬೆಳಗವ್ವ ಪಾತ್ರೆಗಳ ।
ಕೇಳವ್ವ ಸೋಸಿ । ನೀರನು ಕುಡಿಯಿರಿ ॥ ತಂಗಿಯರೆ ॥ ॥ ೬ ॥

ಮಾಡವ್ವ ಅಡಿಗೆಯನು । ರುಚಿಯಾಗಿ ಒಡಲೀಗೆ ।
ಬಿಡದಂತೆ ನೊಣಗಳು । ಕೂಡ್ರದೊಳಿಂಸು ॥ ತಂಗಿಯರೆ ॥ ॥ ೭ ॥

ಚಿಕ್ಕಲಿಗಳೆಂಜಲವ । ಮಕ್ಕಳಿಗಿಕ್ಕಲುಬೇಡ ।
ಉಕ್ಕೇರಿ ನಂಜಿನ । ಜ್ವರ ಬರುತಿಹವು ॥ ತಂಗಿಯರೆ ॥ ॥ ೮ ॥

ಬಾರೆಸಖಿ

ಬಾರೆಸಖಿಗ್ಹೂವ ಮುಡಿಸುವೆವೂ । ವನಿತೆ ಮುತ್ತೈದೆರು ಬನ್ನಿ ನೀವೂ ।
ಹರುಷದಿಂದಾಲಿ ಹಸೆ ರಚಿಸುವೆವೂ। ಜನಪಸತಿಯ ನಾವು ಕುಳ್ಳಿರಿಸುವೆವೂ ೧।

ಸರಿನಾರಿಯರು ತ್ವರಿತದಲೀ । ಪರಮ ಗಂಧಾಕ್ಷತೆ ಧರಿಸುತಲೀ ।
ಮರಗು ಮಲ್ಲಿಗೆಹಾರ ಮುಡಿಸುತಲೀ ವರ ಶಾಸೆಯನೀಡೆ ಪಾಡುತಲೀ ॥೨॥

ನಿಂಬು ಜಂಬು ದಾಳಿಂಬರ ತೆಂಗು । ರಂಭೆಗೆ ಫಲಉಡಿ ತುಂಬುತಲಿ ।
ಸಂಭ್ರಮದಿಂದಾಲಿ ಅಂಬು ಜಾಕ್ಷಿಯರೂ। ಗಂಭೀರನ ನೀ ಪಡೆಯೆಂಬುತಲಿ ॥ ೩ ॥

ತತ್ವ ಪದಗಳು

ಮನುಜ ಶರೀರ

(ದೇಶಿ--ತೋಡಿ—ಆದಿತಾಳ)

ಮನುಜ ಶರೀರವಿದೇನು ಸುಖಾ । ನೆನೆದರೆ ಘೋರವಿದೇನು ಸುಖಾ । ॥ ಪ ॥

ಜನನ ಮರಣದಾ । ಘನ ಕೂಪದೊಳ್ಬಿದ್ದು । ಅನುಭವಿಸುವದಿದೇನುಸುಖಾ ॥
ತನುವಿದ್ದಾಗಲೇ। ಹೃದಯದ ಶೌಚವ। ಸ್ತನಗಳನುಂಬುವದೇನುಸುಖಾ ॥೧॥

ಅನುದಿನ ಹಸುತೃಷೆ। ಘನ ಘನ ರೋಗದೊ । ಅನುಭವಿಸುವದಿದೇನುಸುಖಾ ।
ನೆನೆಯಲುನಿತ್ಯನೀ। ಗುರ್ಳೈಯೊಳಂತಿರ್ಪ। ತನುಮಲಭಾಂಡವಿದೇನುಸುಖಾ।೨।

ಪರಿ ಪರಿ ವಿಧದಲಿ । ಪಾಪವಗಳಿಸುತ । ನರಕೆ ಬೀಳುವದೇನುಸುಖಾ ॥
ಪುರಂದರ ವಿಠಲನಾ । ಮನದೊಳು ನೆನೆದುಸ । ಧರ್ಮದೊಳಿರೆ ಆಗಸುಖಾ ॥೩॥

ಶಿವ ಶಿವ ಜನ್ಮ

(ರಾಗ—ಭೈರವಿ—ತ್ರಿತಾಳ)

ಶಿವ ಶಿವ ಜನ್ಮ ಇದು ವ್ಯರ್ಥವೋ । ಶಿವ ಶಿವ ಜನ್ಮ ಇದು ವ್ಯರ್ಥವೋ ।
ಶೀವಾ ಸತ್ಕಾರ್ಯಗಳನು ಮಾಡಾದ । ನೀಚ ಜನ್ಮ ಇದು ವ್ಯರ್ಥವೋ ॥ಪ॥

ಸ್ವಾಮಿಯ ಪಾದವ ಸೇವಮಾಡಿಪೂಜಿಸಿ । ಕಾಮಿತ ಫಲಗಳ ಪಡೆಯದಲೆ ।
ಕಾಮಿನಿಯಾರೊಳು ಕಾಮಿಸಿ ಬೀಳ್ವ । ನೀಚ ಜನ್ಮ ಇದು ವ್ಯರ್ಥವೋ ॥೧॥

ಲೋಕ ಕಲ್ಯಾಣದಿ ತನುಮನಧನಗಳ । ಸಾಕಾಗುವಂತೆ ದುಡಿಸದಲೆ ।
ಕಾಕು ಮನಸಾದಿ ನೂಕಿನುಗ್ಗಾಗುವ । ನೀಚ ಜನ್ಮ ಇದು ವ್ಯರ್ಥವೋ ॥ ೨॥

ಬಾಸುರವರ ಮಠ ದೀಕ್ಷಾನ ಮುಕ್ತಿಯ । ಲೇಸಾಗಿನೀನತಿ ಬಯಸದಲೆ ।
ಹೇಸಿ ಸಂಸಾರದಿ ಘಾಸಿಯಿಂದ ನಾಶಿಪ। ನೀಚ ಜನ್ಮ ಇದು ವ್ಯರ್ಥವೋ ॥೩॥

ಶಿವ ನಿನ್ನಪಾದವ

ಶಿವ ನಿನ್ನ ಪಾದವ ನಂಬಿದೆ । ಎನ್ನ । ಕಾಯುವ ಭಾರವು ನಿನ್ನದು ಎಂದೆ ॥ಪ॥

ನೀನೆಂಬೋ ಮಮಕಾರದಿಂದೇ । ಶಿವ । ನಾನೆಂಬ ಮಮಕಾರದಿಂದೇ ।
ನಾನಾ ಜನ್ಮಗಳೆಲ್ಲಾವ ತಿರುಗಿ ನಾ ಬಂದೇ। ಎನಗಿನ್ನು ದಾರಿಯು
ತೋರದುಮುಂದೆ । ದೀನ ರಕ್ಷಕ ನೀ । ಬಾರಯ್ಯ ತಂದೆ ॥ ॥ ೧ ॥

ಬಕುತರ ಬಂಟ ನೀನಂತೆ । ಶಿವ । ಬಕುತರ ಬಂಟ ನೀನಂತೆ ।
ಮುನ್ನ ಬಾಣನ ಬಾಗಿಲ ಕಾಯ್ದವನಂತೆ । ಬಾಲಲೋಚನ ನಿನ್ನ
ಭಜಿಸಿದ ಉಪಮನ್ಯು । ಬಾಲಭಾವಕೆ ಮೆಚ್ಚಿ ಕ್ಷೀರ ವಾರಿಧಿ ಇತ್ತೆ । ॥ ೨॥

ತನು ಮನು ಧನ ನಿನ್ನದಯ್ಯ । ಶಿವ । ತನುಮನಧನ ನಿನ್ನದಯ್ಯ ।
ನಿನ್ನ ದಾಸರ ಶೇವೆಯು ನನ್ನದು ನೋಡಯ್ಯ । ಘನಮೋಕ್ಷ ಪದವಿಯ
ನಾನೊಲ್ಲೆನಯ್ಯ । ಅನುದಿನ ತವನಾಮ ನೆನೆಯುವೆನಯ್ಯ ॥ ॥ ೩ ॥

ಶಿರದೊಳು ಗಂಗೆಯ ಧರಿಸಿ । ಶಿವ । ಶಿರದೊಳು ಗಂಗೆಯ ಧರಿಸಿ ।
ಗಿರಿಜಾತೆಯ ವಾಮಾಂಕಭಾಗದೊಳಿರಿಸಿ । ವರಗುಣ ನಂದಿಯನೇರಿ ।
ಮೆರೆಯುವ ಪರಮೇಶ ಮರಣವಿನಾಶ। ವರಯಾಳನಳನಿಧಿ ವಾಸರಮೇಶ ॥೪॥

ಜಲ್ದಿ ನೋಡಿಕೊ

ಜಲ್ದಿ ನೋಡಿಕೋ ತಂಗಿ । ಬಂದುದೆಲ್ಲಿ । ಮುಂದೆ ಹೋಗೊದೆಲ್ಲಿ ? ।
ಹಿಂದೆ ನಿನ್ನ ಪತಿಸುತರ । ಭ್ರಾಂತಿಯಲ್ಲಿ । ಮುಕ್ತಿಯಾಗೊದೆಲ್ಲಿ ? ॥ ಪ ॥

ಹಿಂದಾಕ್ಕೆ ಎಷ್ಟು ಜನ್ಮ । ತಿರುಗಿ ಬಂದಿ । ಅಲ್ಲಿಂದೇನು ತಂದಿ ? ।
ನರಜನ್ಮದಲಿ ಬಹು । ಸುಖಪಟ್ಟೆನೆಂದಿ । ದಾನ ಕೊಟ್ಟೆನೆಂದಿ । ॥ ೧ ॥

ಉಂಡದ್ದು ಉಟ್ಟದ್ದು ನಿನ್ನ । ಹೊಟ್ಟೆಗಾಯ್ತು । ಇಟ್ಟದಿಲ್ಲೆ ಹೋಯ್ತು ।
ದಾನಾ ಕೊಟ್ಟರೆ ನಿನ್ನ । ಹೊತ್ತಿಗಾಯ್ತು । ಮುಂದಿನ ಬುತ್ತಿಗಾಯ್ತು ॥ ೨ ॥

ಕೊಟ್ಟರ್ಹೋದಿತೆಂಬ ಗುಣ । ಹುಟ್ಟಿತಲ್ಲಿ । ಅದು ನಿನ್ನಲ್ಲಿ ।
ಸಂತೋಷವಿಲ್ಲ ನಿನ್ನ । ಮನಸಿನಲ್ಲಿ । ದಾನಕೊಡುವಲ್ಲಿ । ॥ ೩ ॥

ಪಾಪ ಮಾಡ ಬೇಡ ಲತ್ತಿ । ತಿಂದಿಯಲ್ಲಿ । ಯಮರಾಯನಲ್ಲಿ ।
ಪುಣ್ಯ ಮಾಡಿದಾರೆ ಮುಕ್ತಿ । ದೊರಕೊದೆಲ್ಲಿ । ಸದಾಶಿವನಲ್ಲಿ । ॥ ೪

ಯರವೀನ ಸಂಸಾರ । ತಿಳಿಯಲೊಲ್ಲಿ । ನಿನ್ನ ಮನಸಿನಲ್ಲಿ ।
ಗುರು ಬಸವೇಶನ । ಪಾದದಲ್ಲಿ । ನಂಬಿಗಿಡು ಅಲ್ಲಿ । ॥ ೫ ॥

ಕಾಂತೆ ಕೇಳಮ್ಮ

ಕಾಂತೆ ಕೇಳಮ್ಮ ಈ ಕಾಯಾ । ತತ್ವದ ನಿರ್ಣಯ ।
ಕಂತು ಹರನಿರುವನು । ಗುರುರಾಯಾ । ನೋಡಮ್ಮ ಜಾಣೆ । ॥ ಪ ॥

ಚಿತ್ತ ಪುರದಲ್ಲಿ ಇರುವವನಾ । ಮತ್ತೆಲ್ಲಿಯು ಸಿಗನೂ ।
ಭಕ್ತರ ಭಾವದಲಿ ಮೆರೆಯುವನಾ । ನೋಡಮ್ಮ ಜಾಣೆ । ॥ ೧ ॥

ವರಚೌಕ ಮಧ್ಯಮಂಟಪದಿ । ಪರಿಪರಿ ಶೃಂಗರದಿ ।
ಪರಮಘನಲಿಂಗತಾನಾಗಿ । ನೋಡಮ್ಮ ಜಾಣೆ । ॥ ೨ ॥

ಬಾಯ ಮಾತಿನ ಮಾತಲ್ಲಾ । ಬಹುಜಾಲದ ಕೀಲ !
ರಾಯ ಮುನಿಗಳಿಗಳವಲ್ಲ । ನೋಡಮ್ಮ ಜಾಣೆ । ॥ ೩ ॥

ಹಲವ ಹಂಬಲಿಸಿದರೇನಿಲ್ಲಾ । ಬಹುಬಳಲಿದರಿಲ್ಲ ।
ಲಲನೆ ನಿನ್ನಲ್ಲಿಹುದಲ್ಲಾ । ನೋಡಮ್ಮ ಜಾಣೆ । ॥ ೪ ॥

ಕಾಲು ಕೈ ಕಣ್ಣು ಮೊದಲಿಲ್ಲಾ । ನಲಿದಾಡುವನಲ್ಲ ।
ಮೂಲ ಪ್ರಣಮುದನುಕೂಲಾ । ನೋಡಮ್ಮ ಜಾಣೆ । ॥ ೫ ॥

ನಾರಿ ಕೇಳಮ್ಮ ಈ ಮಾತೂ । ಶರಣರ ಸಂಪತ್ತು ।
ಮರುಳ ಜನರಿಗೆ ದೊರೆಯೂದು । ನೋಡಮ್ಮ ಜಾಣೆ । ॥ ೬ ॥

ಪೊಡವಿ ಪತಿ ನಗರುರದೇವಾನು । ವೃಥರಾಯನಿಹನು ।
ಒಡೆಯ ಹೊನಗುತ್ತಿಲಿ । ಮೆರೆಯುವನಾ ನೋಡಮ್ಮ ಜಾಣೆ । ॥ ೭ ॥

ಕುಟ್ಟಾನು ಬಾರವ್ವ

ಕುಟ್ಟಾನು ಬಾರವ್ವ ತಂಗಿ । ಕುಟ್ಟಾನೆ ಕೆಟ್ಟ ಗುಣಗಳ ಹೂವಾ ।
ಕುಟ್ಟಿ ಕುಟ್ಟಿ ಬಿಟ್ಟುಮಾಡಿ । ಬಿಟ್ಟು ಬಡೋಣೆ ತಂಗಿ । ಹೂವಾಹಾಸುವಾ ॥ಪ॥

ದೇವ ಬಲದ ಒನಿಕೆಯ ಹಿಡಿದು । ಜೀವ ಬಲದ ಒರಳಿಗೆ ಹಾಕಿಹೂವಾ ।
ದೈವ ಗುಣಗಳ ಕುಟ್ಟಿ ಕುಟ್ಟಿ । ಧ್ಯಾನಮಾಡೋಣೆ ತಂಗಿ । ಹೂವಾಹಾಸುವಾ।
॥ ೧ ॥

ಸುಳ್ಳುಯೆಂಬೊ ಪೊಳ್ಳುಕಾಳು । ಒಳ್ಳನಲಿ ಕುಟ್ಟುವಾಗ ಹೂವಾ ।
ಒಳ್ಳೆದಾಗಿ ಉಳಿದುದೊಂದೆ । ಸತ್ಯಪ್ರೀತಿ ಭಕ್ತಿ ತಂಗಿ । ಹೂವಾಹಾಸುವಾ ॥೨॥

ವಾಕ್ಯವೆಂಬೊ ಮರವ ಹಿಡಿದು । ಕಾಕುಗುಣಗಳ ಕೇರುವಾಗ ಹೂವಾ ।
ಸೊಕ್ಕುಸಂಶಯುವೆಂಬೊ ತವಡ । ಪಕ್ಕಾ ನ್ಹಾರಿಸೋಣ ತಂಗಿ । ಹೂವಾ
ಹಾಸುವಾ । ॥ ೩ ॥

ಮನನವೆಂಬೊ ಮಾವಿನ ಹಣ್ಣ । ಜೇನಿನಂತೆ ತಿನ್ನುವಾಗ ಹೂವಾ ।
ಮನಸಾವು ಹಿಗ್ಗಿ ಕುಗ್ಗಿ । ಕನಸ ಕಂಡೇನೆ ತಂಗಿ । ಹೂವಾಹಾಸುವಾ ॥ ೪ ॥

ಸಾವು ಬಂತೆ ಮರ್ತ್ಯದಲ್ಲಿ । ಸಾವುಯಿಲ್ಲ ಸ್ವರ್ಗದಲ್ಲಿ ಹೂವಾ ।
ಸಾವುಗೆದ್ದ ಸಿದ್ಧೇಶ್ವರನ । ನಿತ್ಯನೆನೆಯುವ ತಂಗಿ । ಹೂವಾಹಾಸುವ್ವಾ ॥ ೫ ॥

ಕೊಡ ನಾನು ಹೊರಲಾರೆ

ಕೊಡ ನಾನು ಹೊರಲಾರೇನೆ । ಇಂಥಾ । ಕೊಡ ನಾನು ಹೊರಲಾರೇನೆ ॥ಪ॥

ಕೊಡ ನಾನು ಹೊರಲಾರೆ । ಪಡಿ ಕಷ್ಟ ಪಡಲಾರೆ ।
ಗಡನೆ ಮರಳಿ ನಾನು । ಬರಲಾರೆ ನಕ್ಕ ॥ ಕೊಡ ನಾನು ॥ ॥ ಅ ॥ ಪ ॥

ಒಂಭತ್ತು ತೂತೀನ । ತುಂಬಿದ ಕೊಡನೆ ।
ಸಿಂಬಳ ಮಲ ಮೂತ್ರ । ಸೋರುವ ಕೊಡನೇ ॥ ಕೊಡ ನಾನು ॥ ॥ ೧ ॥

ನಿತ್ಯಾವು ತೊಳಿದಾರೆ । ಒತ್ತಿನಾರುವ ಕೊಡನೇ ।
ನೃತ್ಯ ಪಾಪದ ಕುಂಬ । ಪಡಿಸೆಂಟಿ ಕೊಡನೇ ॥ ಕೊಡ ನಾನು ॥ ೨ ॥

ಆಪತ್ತು ಬಂದಾಗ । ನರಳೂವ ಕೊಡನೇ ।
ಜೋಪಾನ ಮಾಡಿದರೆ । ಜರಿಯುವ ಕೊಡನೇ ॥ ಕೊಡ ನಾನು ॥ ॥ ೩ ॥

ಚನ್ನ ಚಿದಾನಂದ । ನಾಜ್ಞೇಯ ಕೊಡನೇ ।
ಬನ್ನ ಬೊಗುಳಿ ಮಾಡಿ । ಒಡದ್ಹೋಗೊ ಕೊಡನೇ ॥ ಕೊಡ ನಾನು ॥ ॥ ೪ ॥

ಸದಾಶಿವನ ಸ್ಮರಣೆ

ಸದಾಶಿವನ ಸ್ಮರಣೆ ಪಾದ ಕಮಲವ । ಸದಾವ ಕಾಲದೊಳು ನೆನೀನೆನೀ ॥ಕೇಳ॥
ಮದನತಾಪದಿ ಬಳಲಬೇಡಿರಿ । ಇದುವೇನು ಸ್ಥಿರ ನಿಮ್ಮ ಮನೀ ಮನೀ ॥ ಪ ॥

ಘಟಾನು ಘಟಿತ ತಂಬೂರಿಯು ಘಟವಿದು । ಅರತಾಗಿನ। ಮನೀ ಮನೀ। ಕೇಳ್।
ಘಟದ ಒಳಗಿನ ಜೀವ ಪುಟಿದು ಹೋಗುವಾಗ । ನಿಟಿಲ ಪಂಚಾಕ್ಷರಿ ನೆನೀನೆನೀ ॥ ೧ ॥

ಪರಿಪರಿ ಸಂಸಾರದೊಳಗಿರುವದು ಇದು। ದುರಿತದ ತಾಬ್ಯಾನೀ ಬ್ಯಾನೀ ।ಕೇಳ।
ಕರುಣ ಸಾಗರನ ಸ್ಮರಣೆಯು ಮಾಡಲು । ಸುರಿವದು ಅಮೃತದ ಹನೀ ಹನೀ ॥ ೨ ॥

ಮಡಿ ಮಡಿ

ಮಡಿ ಮಡಿ ಮಡಿಯೆಂದಡಿಗಡಿ ಹಾರುವಿ । ಮಾಡಿ ಮಾಡುವ ಬಗೆಬೇರುಂಟು ।
ಪೊಡವಿ ಪಾಲಕನ ಪಾದಧ್ಯಾನವ । ಬಿಡದೆ ಮಾಡುವದದು ಮಡಿಯು ॥ ಪ ॥

ಬಟ್ಟೆ ನೀರೊಳಗಿಟ್ಟು ಮುಳುಗಿ ನೀ । ಉಟ್ಟರೆ ಅದು ಬೇರೆ ಮಡಿಯಲ್ಲಾ ।
ಹೊಟ್ಟೆಯೊಳಗಿನ ಕಾಮಕ್ರೋಧವ । ಬಿಟ್ಟು ಬಿಡುವದು ಅದು ಮಡಿಯು ॥ ೧ ॥

ದಶಮಿ ದ್ವಾದಶಿ ಪುಣ್ಯದಿನದಲಿ । ಅಸಮತೀರ್ಥದಿ ಮುಳುಗ್ವದು ಮಡಿಯೆ ।
ದೋಷಕಂಜುತ ಪರನಿಂದೆಯ ತ್ಯಜಿಸಿ । ಯಮ ಪಾಶವ ಹರಿವದು ಮಡಿಯು ॥ ೨ ॥

ಬಿಡದೆ ತ್ರಿಕಾಲ ಸ್ನಾನವ ಮಾಡಿ । ಒಡಕ ಗಡಿಗೆ ತೊಳೆವದು ಮಡಿಯೇ ।
ಒಡಲೊಳು ವಂಚನೆಯಿಲ್ಲದೆ ನೀನು । ಬಡವರಿಗನ್ನವ ಈವುದು ಮಡಿಯು ॥ ೩ ॥

ಇಚ್ಛೆಯಿಲ್ಲದ ಮಲಮೂತ್ರ ಶರೀರವ । ನೆಚ್ಚಿ ತಿಕ್ಕಿ ತೊಳೆವದು ಮಡಿಯೇ ।
ಅಚ್ಯುತ ನಂದನ ನಾಮಸ್ಮರಣೆಲಿ ಸಂಚಿತ ಕಳೆವದು ಅದು ಮಡಿಯು ॥ ೪ ॥

ಹಿರಿಯರು ಗುರುಗಳು ಹರಿದಾಸರ ಕಂಡು । ಚರಣಕೆರಗುವದು ಮಡಿಯು ।
ಭರದಿ ಪುರಂದರ ವಿಠಲನ ಬಿಡದೆ । ಸ್ಮರಣೆಯು ಮಾಡುವದದು ಮಡಿಯು ॥ ೫ ॥

ಅಸಮಾಕ್ಷ

ಅಸಮಾಕ್ಷ ಪೊಗಳುವೆನು । ನಾನಿನ್ನ ದಿನ ದಿನವು ।
ಬಿಸಜಾಕ್ಷ ಸಲಹೆನ್ನ । ಅನವರತವು ॥ ॥ ೧ ॥

ಆಡಿ ತಪ್ಪುವೆ ನಾನು । ಮಾಡಿ ತಪ್ಪುವೆ ನಾನು ।
ಕೂಡಿ ತಪ್ಪುವೆ ನಾನು । ಕಾಡ ಬೇಡೆನ್ನನೂ ॥ ॥ ೨ ॥

ಇಳೆಯ ಭೋಗವ ನೆಚ್ಚಿ । ಮರದೆನ್ನೈ ಸಲೆ ನಿಮ್ಮ ।
ಇಳೆಯಾಣ್ಮ ಕೊಡುಯೆನಗೆ । ಸುಜ್ಞಾನವಾ ॥ ॥ ೩ ॥

ಈಳಿಗೆಯ ಬಾಯೊಳಗೆ । ಸಿಕ್ಕ ಫಲಗಳ ತೆರದಿ ।
ಹೋಳು ಮಾಡಿ ಬಿಡು । ಯನ್ನ-ಜ್ಞಾನವ ॥ ॥ ೪ ॥

ಉಣ್ಣುಡುವ ಚಿಂತೆಯೊಳು । ಸಲೆ ಬೆಂದೆ ಉಮೆಯರಸ ।
ಸಣ್ಣಾಗಿ ಬಗೆಹರಿಸು । ಕಣ್ಬಿಟ್ಟು ಯನ್ನ ॥ ॥ ೫ ॥

ಊರೊಂದು ಯೆನಗಿಲ್ಲ । ಮಾರೊಂದು ಯೆನಗಿಲ್ಲ ।
ಮಾರಾರಿ ನಿಮ್ಮ । ಕೃಪೆಯೊಂದೆ ಸಾಕು ॥ ॥ ೬ ॥

ಋಣ ಕೂಪದೊಳಗೆನ್ನ । ನೂಕದಲೆ ಉಪಕಾರ ।
ತೃಣವಾದರೆನಗೆ । ಮಾಡುವುದ ಕಲಿಸು ॥ ॥ ೭ ॥

ಎತ್ತ ಸುಳಿದರು ಯೆನಗೆ । ಚಿತ್ತ ಶುದ್ಧಿಯನಿರಿಸು ।
ಕಂತುಹರ ಮರ್ಧನನೆ । ಪಾದಕೆರಗುವೆನು ॥ ॥ ೮ ॥

ಏಲಕ್ಕಿ ಕಾಳಂತೆ । ಸದ್ಗುಣವ ಕೊಡು ಯೆನಗೆ ।
ಸುಲಿದರೆ ಸುವಾಸನೆ । ಸಲೆದೋಱುವಂತೆ ॥ ॥ ೯ ॥

ಐಕ್ಯದಾ ಹಾದಿಯನು । ಭಕ್ತಿಯಾ ಮಾರ್ಗವನು ।
ಅಕ್ಕ ಮಹದೇವಿಯು । ವೈರಾಗ್ಯ ದೋರು ॥ ॥ ೧೦

ಒಲಿಸಲೆನ್ನ ಳವಲ್ಲ । ನೀನೆ ಒಲಿಯಲಿ ಬೇಕು ।
ಮೊಲೆಯ ಮಗುವಿಗೆ । ತಾಯಿ ಉಣ್ಣಿಸುವ ತೆರದಿ ॥ ॥ ೧೧ ॥

ಓದು ಕಲಿತರೆ ಇಲ್ಲ । ಹಾಡುಕಲಿತರೆ ಇಲ್ಲ ।
ಹಾದಿ ತಿಳಿಯಲಿ ಬೇಕು । ಪಾಪ ಪುಣ್ಯಗಳ ॥ ॥ ೧೨ ॥

ಔತಣವನೆರೆ ಮಾಡಿ । ಇಕ್ಕಿದಣಿಯಲು ಬೇಡ ।
ತುತ್ತು ಒಡವಂಗೆ । ಇಲ್ಲೆನ್ನ ಬೇಡಾ ॥ ॥ ೧೩ ॥

ಅಂಬುಜಾಕ್ಷನೆ ನಿನ್ನ । ಶಂಭು ಶಂಕರ ನಿನ್ನ ।
ಅಂಬಿಗನೆ ನಂಬಿದೆನು । ಜಗದಂಬಿಕೆಯ ರಮಣ ॥ ॥ ೧೪ ॥

ಆಃ ಅರಸ ನಮಿಸುವೆನು । ಯನ್ನರಸ ಹೊನ್ನರಸ ।
ಆಃ ಅರಸ ಪಾಲಿಸೋ । ಬಸವರಸನೆ ॥ ॥ ೧೫ ॥

ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ

ಗೊಡಚಿ ಶ್ರೀ ವೀರಭದ್ರ ಸ್ತೋತ್ರ

ಕಾಯೊ ಗೊಡಚಿ ಶ್ರೀವೀರಭದ್ರಾ । ಕಾಯೊ ನಿನ್ನಯ ಭಕ್ತರನತಿಭದ್ರ ॥ ಪ ॥

ಮನ್ನಿಸಿ ಕಾಯೊ ನೀ ಯಮ್ಮಯ ತಪ್ಪಾ ।
ನಿನ್ಹೊರತು ಗತಿಯಾರಿಲ್ಲೊ ಯಪ್ಪಾ ।
ಮಾನುಳ್ಳ ಮಕ್ಕಳ ಬೇಡ ಬಂದೆವೊ ಯಪ್ಪಾ ।
ಕಾಯೊ ಕರುಣದಿ ಕಿಡಿ ಕಿಡಿ ರುದ್ರಾ । ಕಾಯೊ ಗೊಡಚಿ ಶ್ರೀವೀರಭದ್ರಾ ॥ ೧ ॥

ಕಿಚ್ಚುಗಣ್ಣನೆ ಹೇಳ್ವವದು ನಿನ್ನೆಸರಪ್ಪ ।
ಹಚ್ಚುವದು ನಿನ್ಹೆಸರಲಿ ನಾವ್ ದೀಪ ।
ಹೆಚ್ಚಿಸು ಮಕ್ಕಳ ಮರಿ ನೀ ಗುಂಪ ।
ಕಾಯೊ ಕರುಣದಿ ಕಣ್ಣಿಟ್ಟು ಯಮ್ಮ । ಕಾಯೊ ಗೊಡಚಿ ಶ್ರೀವೀರಭದ್ರಾ ॥ ೨ ॥

ಬಿಟ್ಟು ಬಿಡು ಯಮ್ಮ ಮೇಲಿನಾ ಕೋಪಾ ।
ಸುಟ್ಟು ಸುಣ್ಣಾದೆವೊ ನಾವ್ ಅತಿತಾಪ ।
ಬಿಟ್ಟುದೇ ತಪ್ಪು ನಿನ್ನ ಪೂಜೆಯ ಸಂಪಾ ।
ಕಾಯೊ ಕರುಣದಿ ಮೊರೆ ಹೊಕ್ಕವರಾ । ಕಾಯೊ ಗೊಡಚಿ ಶ್ರೀವಿರಭದ್ರಾ, ॥೩॥

ನಾವು ಗೊಡಚಿಗೆ ಹೋದದು ೯–೧–೧೯೪೦ } ಶ್ರೀ ವೀರಭದ್ರನ ಪಾದಧೂಳಿ ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ

ವ ಚ ನ ಗ ಳು

ರಾಗ :— ಭೀಮ ಪಲಾಸ ನಿ. ಸಾ ಗ ಮ ಪ. ನಿ. ಸಾ.

ವಚನದಲ್ಲಿ ನಾಮಾಮೃತವ ತುಂಬಿ ।
ನಯನದಲ್ಲಿ ನಿಮ್ಮ ಮೂರುತಿ ತುಂಬಿ ।
ಮನದಲಿ ನಿಮ್ಮಾ ನೆನಹೂ ತುಂಬಿ ।
ಕಿವಿಯಲಿ ನಿಮ್ಮಾ ಕೀರುತಿ ತುಂಬಿ ।
ಕೂಡಲ ಸಂಗಮನೊಳಗಾನು ತುಂಬಿ ।

(ಶ್ರೀ ಬಸವಣ್ಣ)

ಬಂಜೆಯು

ರಾಗ :—ಮುಲ್ತಾನಿ ತಾಳ :—ಏಕತಾಳ (ಗೋವಿಂದ ಸೋ.......ಎಂಬಂತೆ)

ಬಂಜೆಯು ಬೇನೆಯ ನರಿಯಳು । ಮಲತಾಯಿ ಮುದ್ದು ಬಲ್ಲಳೇ ॥ ॥ ಪ ॥
ನೊಂದ ನೋವ ನೋಯದವರು । ಎತ್ತ ಬಲ್ಲರೌ ತಾಯೇ ॥ ॥ ೧॥
ಚನ್ನ ಮಲ್ಲಿಕಾರ್ಜುನ ನೀ । ಸಿರಿದಲಗೊಡಲಲ್ಲಿ ಮುರಿದು ॥ ॥ ೨ ॥
ಹೊರಳುವಳ ನೀವೆತ್ತ । ಬಲ್ಲಿರೆ ಎಲೆ ತಾಯಿಗಳಿರಾ ॥ ॥ ೩ ॥

(ಶ್ರೀ ಅಕ್ಕಮಹಾದೇವಿ

ದಯವಿಲ್ಲದ

ರಾಗ:— ಜಟಿದೀಪ ತಾಲ:- ತ್ರಿತಾಲ (ಕುಸುಮಾಂಜಲಿ ವಾಹಿಲೀ ......ಯೆಂಬಂತೆ)

ದಯವಿಲ್ಲದ ಧರ್ಮವ್ಯಾ । ಅವುದಯ್ಯ ।   ॥ ಪ ॥
ದಯವೇ ಬೇಕು । ಸಕಲ ಪ್ರಾಣಿಗಳಲ್ಲಿ ॥

ದಯವೇ ಧರ್ಮದ । ಮೂಲವಯ್ಯ ।
ಕೂಡಲ ಸಂಗಮದೇವ । ನಂತಲ್ಲದೊಲ್ಲನಯ್ಯ ॥   ॥ ೧ ॥

(ಶ್ರೀ ಬಸವಣ್ಣ)

ಆಶೆಯಿಂದ

ರಾಗ:— ಪಹಾಡಿ ತಾಳ:- ಕವಾಲಿ (ಘಾವತ ಯೋಯಿ ಸಖ್ಯಾ ...ಎಂಬಂತೆ)

ಆಶೆಯಿಂದ ಬಿಟ್ಟು । ಕಿರಿಯರಾರಿಲ್ಲ ।
ನಿರಾಶೆಯಿಂದ ಬಿಟ್ಟು । ಹಿರಿಯರಾರಿಲ್ಲ ॥   ॥ ಪ ॥

ದಯದಿಂದ ಬಿಟ್ಟು । ಧರ್ಮವಿಲ್ಲ ।
ವಿಚಾರದಿಂದ ಬಿಟ್ಟು । ಸಹಾಯಗಳಿಲ್ಲ ॥   ॥ ೧ ॥

ಸಚ್ಛರಾಚಾರಕೆ । ಸಕಳೇಶ್ವರ ।
ದೇವರಿಂದ ಬಿಟ್ಟು । ದೈವವಿಲ್ಲ ॥   ॥ ೨ ॥

(ಶ್ರೀ ಸಕಳೇಶ ಮಾದರಸ)

ಚಕೋರಂಗೆ

ರಾಗ:— ಭೈರವಿ ತಾಳ:_ದಾದರಾ (ರಚಾ, ಪ್ರಭು ತೂನೆ ...ಎಂಬಂತೆ)

ಚಕೋರಂಗೆ ಚಂದ್ರಮನ । ಬೆಳಗಿನ ಚಿಂತೆ ।
ಅಂಬುಜಕೆ ಭಾನುವಿನ । ಉದಯದ ಚಿಂತೆ ॥   ॥ ಪ ॥

ಭ್ರಮರಂಗೆ ಪರಿಮಳದ । ಬಂಡುಂಬ ಚಿಂತೆ ।
ಎನಗೆ ನಮ್ಮ ಕೂಡಲಸಂಗಮ । ದೇವರ ನೆನೆವ ಚಿಂತೆ ।   ॥ ೧ ॥

(ಶ್ರೀ ಬಸವಣ್ಣ)

ಅತ್ತಲಿತ್ತ

ರಾಗ :__ಮಿಶ್ರಪಹಾಡಿ ತಾಲ :-ಕವಾಲಿ (ಯಮುನಾಜಳಿ ಖೇಳೂಖೇಳ.... ಎಂಬಂತೆ)

ಅತ್ತಲಿತ್ತ ಹೋಗದಂತೆ। ಹೆಳವನ ಮಾಡಯ್ಯ ತಂದೆ। ॥ಪ॥

ಸುತ್ತಿ

ಮ

ಬಿ

ಇ ॥೧॥

ವಣ್ಣ)

(ರಾಗ ...ಂತೆ)

॥ಪ॥

ಸವಣ್ಣ)

)

॥ಪ॥

॥೧॥

ನುಹದೇವಿ)

ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ ಬರೆದಿರು

ಪುಸ್ತಕಗಳು

೧.	ರಾಮಪುರದ ಶ್ರೀಹಾಲಸ್ವಾಮಿಗಳ ಚರಿತ್ರೆ	೦—೧—೦
೨.	ಸನ್ಮಾರ್ಗಬೋಧಿನಿ	೦—೨—೦
೩.	ಗೀತಾಲಹರಿ	೦—೨—೦
೪.	ಬಸವಬೋಧಾಮೃತ	೦—೧—೦
೫.	ಹೆಣ್ಣಿನತೊಡಕು	೦—೨—೦
೬.	ಗರ್ಭರತ್ನಾಕರ	೦—೬—೦
೭.	ಮಕ್ಕಳ ನಾಮಾಂಕಿತ ಮಾಲೆ	೦—೦—೩
೮.	ರಾಷ್ಟ್ರಗೀತಾವಳಿ	೦—೨—೦
೯.	ಶ್ರೀಕಾಡ ಸಿದ್ಧಮ್ಮನ ಕಥೆ	೦—೧—೦
೧೦.	ನಾಡದೇವಿಯರ ಗೀತ	೦—೦—
೧೧.	ಮಕ್ಕಳನೀತಿ	೦—೦—
೧೨.	ನವ ಸ್ತ್ರೀ ಪದ್ಧತಿ	೦—೦—
೧೩.	ಸತಿಪತಿಯ ಬೆಡಗಿನ ವಚನ	೦—೦—
೧೪.	ಭಾರತ ನಾಡದೇವಿಯರು	೦—೧೦—
೧೫.	ಸ್ವಾಮಿ ರಾಮತೀರ್ಥರ ಉಪದೇಶಗಳು	೦—೧—

ಪುಸ್ತಕಗಳು ದೊರೆಯುವ ಸ್ಥಳ:—

ಕರ್ನಾಟಕ ಸಾಹಿತ್ಯ ಮಂದಿರ,
ಧಾರವಾಡ

ಮುದ್ರಕರು:— ಶ್ರೀ ನಾರಾಯಣಾಚಾರ್ಯ ಅಣ್ಣಾಚಾರ್ಯ ಹೊಸಕೇರಿ
ವಿಜಯ ಮುದ್ರಾಲಯ, ಧಾರವಾಡ.

ಪ್ರಕಾಶಕರು:— ಗಿರಿಜಮ್ಮ ಬಸವಪ್ರಭು ಇಚ್ಚಂಗಿಮಠ, ಧಾರವಾಡ.